ಗುರುದೇವ



ಇಂದು ರವಿತಾರೆ ಹಿಮಗಿರಿ ಗಂಗೆ ಗೋದಾ ಸಿಂಧು ಶುಭ ಜಲ ನಿಧಿಗಳೆಲ್ಲವು
ಚಂದದಲಿ ಮೆರೆವನ್ನೆಗಂ ಬಂದ "ಶ್ರೀ ಗುರುದೇವ" ಪೊರೆಯಲಿ ಶಿಷ್ಯ ಬಳಗವನು

ಧಾರ್ಮಿಕ ಮಾಸಿಕ ಪತ್ರಿಕೆ

ಶ್ರೀ ಹೊಂಬುಜ ಅತಿಶಯ ಮಹಾಕ್ಷೇತ್ರ ಶ್ರೀ ವೀರನಿರ್ವಾಣ ಶಕವರ್ಷ ೨೫೪೧ / ಶ್ರೀ ದುರ್ಮುಖಿ ನಾಮ ಸಂವತ್ಸರ
೧೫-೦೬-೨೦೧೬ : ಆಷಾಢ ಮಾಸ : ಶುಕ್ಲ ಪಕ್ಷ ಶುಕ್ರವಾರ

ಸಂಪುಟ : ೬೨
ಪುಟ : ೮ ಸಂಚಿಕೆ : ೧೧

ಪರಮ ಸಂರಕ್ಷಕರು, ಸ್ವಾಮಿತ್ವ, ಪ್ರಧಾನ ಸಂಪಾದಕರು : ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು, ಶ್ರೀಕ್ಷೇತ್ರ ಹೊಂಬುಜ

50ನೇ ವರ್ಷದ ಸ್ವರ್ಣ ಮಹೋತ್ಸವ-ಜನ್ಮ-ಜಯಂತಿ



ಕುಂಥಲಗಿರಿ (ಕೊಲ್ಲಾಪುರ) : ಇಲ್ಲಿಯ ಶ್ರೀಕ್ಷೇತ್ರ ಕುಂಥಲಗಿರಿಯ ಗಣಾಧಿಪತಿ ಗಣಧರಾಚಾರ್ಯ ಶ್ರೀ 108 ಕುಂಥುಸಾಗರಜೀ ಮಹಾರಾಜರ ಸ್ವರ್ಣ ಮಹೋತ್ಸವ ಹಾಗೂ 50ನೇ ವರ್ಷದ ಜನ್ಮಜಯಂತಿ ಕಾರ್ಯಕ್ರಮವು ಜೂ. 17 ರಿಂದ 19 ರವರೆಗೆ ಆಚಾರ್ಯ ಸುವಿದಿ ಸಾಗರಜೀ ಮಹಾರಾಜರು, ಆಚಾರ್ಯ ಶ್ರೀ ನಿಶ್ಚಯ ಸಾಗರಜೀ ಮಹಾರಾಜರು ಹಾಗೂ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರ ಪಾವನ ಸಾನಿಧ್ಯದಲ್ಲಿ ಮೂರು ದಿನಗಳ ಕಾಲ ಅದ್ದೂರಿಯಾಗಿ ಜರುಗಿತು.

ಸ್ವರ್ಣ ಜಯಂತಿ ಅಂಗವಾಗಿ ವಿಶೇಷ ಕಾರ್ಯಕ್ರಮಗಳು ಸಂಪನ್ನಗೊಂಡವು. ಜೂ. 17 ಶುಕ್ರವಾರದಂದು ನಿತ್ಯವಿಧಿ, ಮಹಾಮೃತ್ಯುಂಜಯ ವಿಧಾನ, ಪೂಜೆಯೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮ ಸಂಪನ್ನಗೊಂಡಿತ್ತು.

ಜೂ. 18 ರ ಶನಿವಾರದಂದು ನಿತ್ಯಪೂಜೆಯೊಂದಿಗೆ ಮಧ್ಯಾಹ್ನ 3 ಗಂಟೆಗೆ ಕೈಲಾಸ ಪರ್ವತದ 31 ಅಡಿ ಎತ್ತರದ ಭಗವಾನ್ ಶ್ರೀ 1008 ಆದಿನಾಥ ಸ್ವಾಮಿಗೆ ಮಹಾಮಸ್ತಕಾಭಿಷೇಕ ನೆರವೇರಿತು. ನಂತರ 7 ಗಂಟೆಗೆ 7000 ಆರತಿ ಹಚ್ಚಿ ದೀಪೋತ್ಸವ ನೆರವೇರಿಸಲಾಯಿತು. ಸಂಜೆ

2ನೇ ಪುಟಕ್ಕೆ

ಹೊಂಬುಜ ಜೈನ ಮಠಕ್ಕೆ ಪ್ರಧಾನಿ ಮೋದಿ ಸಹೋದರ ಭೇಟಿ

ಹೊಂಬುಜ : ಅತಿಶಯ ಶ್ರೀಕ್ಷೇತ್ರ ಹೊಂಬುಜಕ್ಕೆ ಪ್ರಧಾನಿ ನರೇಂದ್ರ ಮೋದಿಯವರ ಸಹೋದರ, ಗುಜರಾತ್‌ನ ಆರೋಗ್ಯ ಇಲಾಖೆಯ ನಿವೃತ್ತ ಅಧಿಕಾರಿ ಶ್ರೀ ಸೋಮಾಬಾಯಿ ಮೋದಿಯವರು ಜು. 04 ಸೋಮವಾರದಂದು ಬೆಳಿಗ್ಗೆ ಭೇಟಿ ನೀಡಿ ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ ಹಾಗೂ ಮಹಾಮಾತೆ ಶ್ರೀ ಪದ್ಮಾವತಿ ಅಮ್ಮನವರ ದರ್ಶನ ಪಡೆದು ಪೂಜೆ ಸಲ್ಲಿಸಿದರು.

2ನೇ ಪುಟಕ್ಕೆ

WWW.HOMBUJAPADMAVATI.ORG

ಶ್ರಾವಣ ಮಾಸದಲ್ಲಿ ಸಂಪತ್ ಶುಕ್ರವಾರ ಪೂಜಾ ಮಹೋತ್ಸವ

ಅತಿಶಯ ಶ್ರೀಕ್ಷೇತ್ರ ಹೊಂಬುಜದ ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ ಮತ್ತು ಮಹಾಮಾತೆ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಗಳವರ ದಿವ್ಯ ಸಾನಿಧ್ಯ, ನೇತೃತ್ವ ಹಾಗೂ ಮಾರ್ಗದರ್ಶನದಲ್ಲಿ ಶ್ರಾವಣ ಸಂಪತ್ ಶುಕ್ರವಾರ ಪೂಜಾ ಮಹೋತ್ಸವಗಳು ಜರುಗಲಿರುವುದು. ಸದ್ಧರ್ಮ ಭಕ್ತವೃಂದದವರು ಶ್ರೀಕ್ಷೇತ್ರಕ್ಕೆ ಆಗಮಿಸಿ ಪೂಜಾ ವಿಧಿ-ವಿಧಾನಗಳಲ್ಲಿ ಪಾಲ್ಗೊಂಡು ತಮ್ಮ ಭಕ್ತಿ ಪೂರ್ವಕ ಪೂಜೆಯನ್ನು ಸಮರ್ಪಿಸಿ ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ, ಮಹಾಮಾತೆ ಶ್ರೀಪದ್ಮಾವತಿ ಅಮ್ಮನವರ ಕೃಪೆಗೆ ಪಾತ್ರರಾಗಬೇಕೆಂದು ವಿನಂತಿಸಲಾಗಿದೆ.

ಸಂಪತ್ ಶ್ರಾವಣ ಶುಕ್ರವಾರ

ದಿನಾಂಕ : 03-08-2016 ರಿಂದ ಶ್ರಾವಣ ಮಾಸ ಪ್ರಾರಂಭ
ದಿನಾಂಕ : 05-08-2016 ರಂದು ಮೊದಲ ಸಂಪತ್ ಶುಕ್ರವಾರ
ದಿನಾಂಕ : 07-08-2016 ರಂದು ಭಾನುವಾರ ನಾಗರಪಂಚಮಿ
ದಿನಾಂಕ : 12-08-2016 ರಂದು ಎರಡನೇ ಸಂಪತ್ ಶುಕ್ರವಾರ (ವರಮಹಾಲಕ್ಷ್ಮೀ ವ್ರತ)
ದಿನಾಂಕ : 17-08-2016 ರಂದು ಬುಧವಾರ ಉಪಾಕರ್ಮ
ದಿನಾಂಕ : 19-08-2016 ರಂದು ಮೂರನೇ ಸಂಪತ್ ಶುಕ್ರವಾರ
ದಿನಾಂಕ : 26-08-2016 ರಂದು ನಾಲ್ಕನೇ ಶುಕ್ರವಾರ

ಸೋಣ ಮಾಸ ಶುಕ್ರವಾರ

ದಿನಾಂಕ : 19-08-2016 ರಂದು ಮೊದಲ ಸೋಣ ಶುಕ್ರವಾರ
ದಿನಾಂಕ : 26-08-2016 ರಂದು ಎರಡನೇ ಸೋಣ ಶುಕ್ರವಾರ
ದಿನಾಂಕ : 02-09-2016 ರಂದು ಮೂರನೇ ಸೋಣ ಶುಕ್ರವಾರ
ದಿನಾಂಕ : 09-09-2016 ರಂದು ನಾಲ್ಕನೇ ಸೋಣ ಶುಕ್ರವಾರ
ದಿನಾಂಕ : 16-09-2016 ರಂದು ಐದನೇ ಸೋಣ ಶುಕ್ರವಾರ

ಸೋಣ ಶುಕ್ರವಾರದ ವಿಶೇಷ ಪೂಜಾ ಮಹೋತ್ಸವ

ಶ್ರೀಕ್ಷೇತ್ರ ಹೊಂಬುಜ ಮಹಾಸಂಸ್ಥಾನದ ಶಾಖಾ ಕ್ಷೇತ್ರಗಳಾದ ವರಂಗ ಮತ್ತು ಹಟ್ಟಿಯಂಗಡಿಯಲ್ಲಿ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ಸೋಣ ಶುಕ್ರವಾರದ ಪೂಜೆಗಳು ದಿನಾಂಕ **19-08-2016, 26-08-2016, 02-09-2016, 09-09-2016, 16-09-2016** ರಂದು ನೆರವೇರಲಿವೆ.

ಸಂಪರ್ಕ : ವರಂಗ ಜೈನ ಮಠ : **9845548688**, ಹಟ್ಟಿಯಂಗಡಿ ಜೈನ ಮಠ : **9448869955**

ಭಕ್ತವೃಂದದವರಿಗೆ ಸೂಚನೆ

ಶ್ರೀ ಕ್ಷೇತ್ರ ಹೊಂಬುಜದಲ್ಲಿ ಇತ್ತೀಚಿನ ದಿನಗಳಲ್ಲಿ ಬರುವ ಭಕ್ತಾಧಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದ್ದು, ಭಕ್ತಾಧಿಗಳ ದರ್ಶನಕ್ಕೆ ಮತ್ತು ಶ್ರೀ ಕ್ಷೇತ್ರದಲ್ಲಿ ಪೂಜಾ ವಿಧಿ-ವಿದಾನಗಳನ್ನು ನಿಗದಿತ ಸಮಯಕ್ಕೆ ನೆರವೇರಿಸಲು ಅನಾನುಕೂಲವಾಗುವ ಸಂಭವವಿರುತ್ತದೆ. ಆದ್ದರಿಂದ ಶ್ರೀಕ್ಷೇತ್ರಕ್ಕೆ ಬರುವ ಭಕ್ತಾಧಿಗಳು ತಮ್ಮ ವಿಶೇಷ ಪೂಜಾ ಕಾರ್ಯಗಳು ಅಂದರೆ ನಾಮಕರಣ/ ಚೌಲಕರ್ಮ/ ವಿವಾಹ ಸಮಾರಂಭ/ ವಧು-ವರರ ಆಶೀರ್ವಾದ ಹೀಗೆ ಇನ್ನಿತರ ಹರಕೆ, ಪೂಜೆ ನೆರವೇರಿಸಲು ಬರುವವರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದರೆ ಸಮರ್ಪಕ ವ್ಯವಸ್ಥೆಯನ್ನು ಕಲ್ಪಿಸಲು ಪೂರ್ವ ಸೂಚನೆಯನ್ನು ಆಡಳಿತ ಕಛೇರಿಯಲ್ಲಿ ಸಂಪರ್ಕಿಸಬೇಕಾಗಿ ವಿನಂತಿ. ಸಂಪರ್ಕ : **08185-262722**

50ನೇ ವರ್ಷದ ಸ್ವರ್ಣ ಮಹೋತ್ಸವ-ಜನ್ಮ-ಜಯಂತಿ

1ನೇ ಪುಟದಿಂದ

9 ಗಂಟೆಗೆ ಶ್ರೀ ರೂಪೇಶ್ ಜೈನ್‌ರವರಿಂದ ಕುಂಥುಗೀತ್ ಮಾಲಾ ಸಾಂಸ್ಕೃತಿಕ ಕಾರ್ಯಕ್ರಮವು ನಡೆಯಿತು.

ಅಂತಿಮ ದಿನವಾದ ಜೂ. 19ರ ಭಾನುವಾರದಂದು ಬೆಳ್ಳಿಗ್ಗೆ ನಿತ್ಯಪೂಜೆಯೊಂದಿಗೆ ಶ್ರೀ 1008 ಚಿಂತಾಮಣಿ ಪಾರ್ಶ್ವನಾಥ ಭಗವಾನರ ಅಭಿಷೇಕ ನಡೆಯಿತು. ಮಧ್ಯಾಹ್ನ 3 ಗಂಟೆಗೆ ಕುಂಥುಸಾಗರಜೀ ಮಹಾರಾಜರ 50ನೇ ಸ್ವರ್ಣ ಮಹೋತ್ಸವ-ಜನ್ಮ ಜಯಂತಿಯ ಕಾರ್ಯಕ್ರಮ ಅದ್ಧೂರಿಯಾಗಿ ನಡೆಯಿತು.

ಈ ಮೂರು ದಿನಗಳ ಕಾರ್ಯಕ್ರಮದಲ್ಲಿ ಪಂಜಾಬ್‌ನ 21 ಜನರ ಬ್ಯಾಂಡ್ ಪಥಕ್ ಎಲ್ಲರ ಗಮನ ಸೆಳೆಯಿತು. ಭಕ್ತಾದಿಗಳಿಗೆ ಭೋಜನದ ವ್ಯವಸ್ಥೆಯನ್ನು ಏರ್ಪಡಿಸಲಾಗಿತ್ತು. ಮೂರು ದಿನಗಳಲ್ಲಿ ಸುಮಾರು 15 ಸಾವಿರಕ್ಕಿಂತ ಹೆಚ್ಚಿನ ಭಕ್ತಾದಿಗಳು ಪಾಲ್ಗೊಂಡಿದ್ದರು.

ಹೊಂಬುಜ ಜೈನ ಮಠಕ್ಕೆ ಪ್ರಧಾನಿ ಮೋದಿ ಸಹೋದರ ಭೇಟಿ

1ನೇ ಪುಟದಿಂದ

ನಂತರ ಶ್ರೀಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ಶ್ರೀಕ್ಷೇತ್ರದ ಇತಿಹಾಸವನ್ನು ವಿವರಿಸಿ ಆಶೀರ್ವದಿಸಿದರು. ಇತಿಹಾಸ ಪ್ರಸಿದ್ಧ ಈ ಮಠದಲ್ಲಿ ಸಕಲ ಭಕ್ತಾದಿಗಳಿಗೆ ಪ್ರತಿನಿತ್ಯ ಜ್ಞಾನ ಮತ್ತು ಅನ್ನ ಪ್ರಸಾದದೊಂದಿಗೆ ಧಾರ್ಮಿಕ ಸೇವೆಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಮಠದ ಜತೆ ನಿರಂತರ ಸಂಪರ್ಕದಲ್ಲಿರುವಂತೆ ಸಲಹೆ ನೀಡಿದರು.

ನಮ್ಮ ಕುಟುಂಬದ ಸದಸ್ಯರೊಬ್ಬರು ಶ್ರೀಮಠಕ್ಕೆ ಆಗಮಿಸಿ ಶ್ರೀ ಪದ್ಮಾವತಿ ದೇವಿಯಲ್ಲಿ ಕೆಲವು ಇಷ್ಟಾರ್ಥ ಸಿದ್ಧಿಗೆ ಹರಕೆ ಮಾಡಿಕೊಂಡಿರುವುದಾಗಿ ಮೋದಿ ತಿಳಿಸಿದರು ಹಾಗಾಗಿ ಖಾಸಗಿ ಕಾರ್ಯಕ್ರಮಕ್ಕಾಗಿ ಕರ್ನಾಟಕಕ್ಕೆ ಆಗಮಿಸಿದ್ದು, ದೇವಿಯ ಹರಕೆ ತೀರಿಸಿ, ಆಶೀರ್ವಾದ ಪಡೆದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಅನೇಕ ಮುಖಂಡರು ಉಪಸ್ಥಿತರಿದ್ದರು.

ವಿದ್ಯಾರ್ಥಿ ವೇತನ

ಬೆಂಗಳೂರು : ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ಸೇರಿದ ಹಾಗೂ 2016 ರಲ್ಲಿ ಎಸ್.ಎಸ್.ಎಲ್.ಸಿ. ಯಲ್ಲಿ ಶೇ. 70ಕ್ಕೂ ಹೆಚ್ಚು ಅಂಕಗಳಿಸಿ ಪಿ.ಯು.ಸಿ. ಅಥವಾ ಡಿಪ್ಲೋಮಾ ವ್ಯಾಸಂಗಕ್ಕೆ ಪ್ರವೇಶ ಪಡೆದಿರುವ ಅರ್ಹ ಜೈನ ವಿದ್ಯಾರ್ಥಿಗಳಿಂದ ನಿಗದಿತ ಅರ್ಜಿಯನ್ನು ಆಗಸ್ಟ್ 30ರ ಒಳಗಾಗಿ ಶ್ರೀಮತಿ ಜಯಮ್ಮ ಜಿ. ದೇಸಾಯಿ ಚಾರಿಟಬಲ್ ಟ್ರಸ್ಟ್ ಆಹ್ವಾನಿಸಿದೆ. ಅರ್ಜಿ ಪಾರಂಗಾಗಿ ಸ್ವ-ವಿಳಾಸವಿರುವ 5/- ರೂ ಅಂಚೆ ಲಕೋಟೆಯನ್ನು ಪ್ರೋ. ಆರ್.ಜಿ. ದೇಸಾಯಿ, ವ್ಯವಸ್ಥಾಪಕ ಧರ್ಮದರ್ಶಿ, ನಂ-50, ಅವನಿ ಶೃಂಗೇರಿ ನಗರ, 7ನೇ ಅಡ್ಡರಸ್ತೆ, ಬಿ.ಟಿ.ಎಂ. 6ನೇ ಹಂತ, ಬೇಗೂರು ಅಂಚೆ, ಬೆಂಗಳೂರು-560114 ಈ ವಿಳಾಸಕ್ಕೆ ಕಳುಹಿಸುವಂತೆ ತಿಳಸಲಾಗಿದೆ. ಸಂಪರ್ಕ : 080-26485086, 09886741507.

ಜೈನ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಬೆಳ್ತಂಗಡಿ : ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಜೈನ ಧರ್ಮೀಯ ವಿದ್ಯಾರ್ಥಿಗಳಿಗೆ ಕೆಲ್ಲಗುತ್ತು ಸಬರಬೈಲು ದಿ. ಕಿನ್ಯಮ್ಮ ಯಾನೆ ಗುಣವತಿ ಅಮ್ಮ ಮೆಮೋರಿಯಲ್ ಟ್ರಸ್ಟ್ (ರಿ) ಹಾಗೂ ಶ್ರಾವಕ ಬಂಧುಗಳ ಸಹಕಾರದಿಂದ ವಿದ್ಯಾರ್ಥಿ ವೇತನವನ್ನು ಕಳೆದ ಹಲವಾರು ವರ್ಷಗಳಿಂದ ನೀಡುತ್ತಾ ಮಕ್ಕಳಿಗೆ ಶೈಕ್ಷಣಿಕ ಪ್ರಗತಿಗೆ ಪ್ರೋತ್ಸಾಹವನ್ನು ನೀಡಲಾಗುತ್ತಿದೆ.

ಇದೇ ರೀತಿ 2016-17ನೇ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ ಜೈನ ಧರ್ಮೀಯ ವಿದ್ಯಾರ್ಥಿಗಳಿಗೆ ಸೆಪ್ಟಂಬರ್ 21 ರಂದು ಶ್ರೀಕ್ಷೇತ್ರ ಹೊಂಬುಜದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರ ದಿವ್ಯ ಉಪಸ್ಥಿತಿಯಲ್ಲಿ ವಿದ್ಯಾರ್ಥಿ ವೇತನವನ್ನು ನೀಡಿ ಪ್ರೋತ್ಸಾಹಿಸಲಾಗುವುದು. ಎಸ್.ಎಸ್.ಎಲ್.ಸಿ. ಉತ್ತೀರ್ಣರಾದ ಹಾಗೂ ಪಿ.ಯುಸಿ., ಪದವಿ, ಐ.ಟಿ.ಐ. ಪಾಲಿಟೆಕ್ನಿಕ್, ಬಿ.ಬಿ.ಎಂ. ಇಂಜಿನಿಯರಿಂಗ್, ವೈದ್ಯಕೀಯ ಇನ್ನಿತರ ವ್ಯಾಸಂಗವನ್ನು ಪ್ರಸ್ತುತ ವರ್ಷದಲ್ಲಿ ಪಡೆಯುತ್ತಿರುವ ವಿದ್ಯಾರ್ಥಿಗಳು ಮಾತ್ರ ನಿಗದಿತ ಅರ್ಜಿ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಬೇಕು. ಅರ್ಜಿಯನ್ನು ಕಚೇರಿಯಲ್ಲಿ ಪಡೆದುಕೊಳ್ಳುವುದು ಮತ್ತು ಅರ್ಜಿಯೊಂದಿಗೆ ಪ್ರಸ್ತುತ ಕಲಿಯುತ್ತಿರುವ ವ್ಯಾಸಂಗ ಪ್ರಮಾಣ ಪತ್ರ, ಕಳೆದ ವರ್ಷ ಕಲಿತು ಉತ್ತೀರ್ಣರಾದ ಬಗ್ಗೆ ಅಂಕಪಟ್ಟಿಯ ಯಥಾಪ್ರತಿ, ವಿದ್ಯಾರ್ಥಿಯ ಮನೆ ವಿಳಾಸ, ಅರ್ಜಿಯಲ್ಲಿ ತಂದೆ ಮತ್ತು ತಾಯಿಯ ಹೆಸರು ಹಾಗೂ ಒಬ್ಬರ ಸಹಿ ಹಾಗೂ ಸಂಪರ್ಕ ಸಂಖ್ಯೆ ನಮೂದಿಸಿ ಆಗಸ್ಟ್ 31ರ ಒಳಗೆ ಕೆ. ಜಯವರ್ಮರಾಜ್ ಬಳ್ಳಾಲ್, ಮ್ಯಾನೆಜಿಂಗ್ ಟ್ರಸ್ಟಿ ಕೆಲ್ಲಗುತ್ತು ಸಬರಬೈಲು ದಿ. ಕಿನ್ಯಮ್ಮ ಯಾನೆ ಗುಣವತಿಯಮ್ಮ ಮೆಮೋರಿಯಲ್ ಟ್ರಸ್ಟ್ (ರಿ.), ಶ್ರೀ ರತ್ನತ್ರಯ ಜೈನ ತೀರ್ಥಕ್ಷೇತ್ರ, ಜೈನ್‌ಪೇಟೆ ಬೆಳ್ತಂಗಡಿ-574214 ದ.ಕ. ಜಿಲ್ಲೆ, ಈ ವಿಳಾಸಕ್ಕೆ ತಲುಪುವಂತೆ ಕಳುಹಿಸಬೇಕೆಂದು ಮ್ಯಾನೆಜಿಂಗ್ ಟ್ರಸ್ಟಿಯಾದ ಕೆ. ಜಯವರ್ಮರಾಜ್ ಬಳ್ಳಾಲ್‌ರವರು ತಿಳಿಸಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಸಂಕರ್ಪ: 08256-233577.

ಸಚಿವ ಸಂಪುಟದಲ್ಲಿ ಸ್ಥಾನ ನೀಡುವಂತೆ ಆಗ್ರಹ

ಯುವಜನ ಮತ್ತು ಕ್ರೀಡಾ ಸಚಿವರಾಗಿ ಶ್ರೀ ಅಭಯಚಂದ್ರ ಜೈನ್ ಯಾವುದೇ ರೀತಿಯ ಕಳಂಕವಿಲ್ಲದೆ ಸತತ ಮೂರು ವರ್ಷಗಳ ಕಾಲ ಕಾರ್ಯಾನಿರ್ವಹಿಸಿದ್ದು, ಆದರೆ ಇತ್ತೀಚೆಗೆ ನಡೆದ ಸಚಿವ ಸಂಪುಟದ ಪುನರ್ ರಚನೆಯ ಪ್ರಕ್ರಿಯೆಯಲ್ಲಿ ಸರ್ಕಾರ ಸಕಾರಣವಿಲ್ಲದೇ ಶ್ರೀ ಅಭಯಚಂದ್ರ ಜೈನ್ ಅವರನ್ನು ಸಂಪುಟದಿಂದ ಕೈ ಬಿಟ್ಟಿರುವುದು ಆಘಾತವಾಗಿದೆ. ಇದರಿಂದ ಜೈನ ಸಮಾಜವನ್ನು ಪ್ರತಿನಿಧಿಸಿ, ಸಮಾಜದ ಕುಂದು-ಕೊರತೆಗಳನ್ನು ನಿವಾರಿಸುವಲ್ಲಿ ಯಾವ ಪ್ರತಿನಿಧಿಯೂ ನಮ್ಮ ಸಮಾಜಕ್ಕೆ ಇಲ್ಲದಂತಾಗಿದೆ. ಎಲ್ಲಾ ಧರ್ಮೀಯರಿಗೆ ಪ್ರಾತಿನಿಧ್ಯ ನೀಡುವಂತೆ ಜೈನ ಸಮುದಾಯದ ಯಾರು ಸಚಿವರಿಲ್ಲದ ಕಾರಣ ಜೈನ ಸಮುದಾಯದವರಿಗೂ ಸಚಿವ ಸ್ಥಾನ ನೀಡಿ ಪ್ರಾತಿನಿಧ್ಯ ನೀಡಬೇಕೆಂದು ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು ಆಗ್ರಹಿಸಿದ್ದಾರೆ.

ಗುಂಜಳ ಫ್ಯಾಮಿಲಿ ಎಜುಕೇಷನ್ ಟ್ರಸ್ಟ್-ವಿದ್ಯಾರ್ಥಿ ವೇತನ

ಬೆಂಗಳೂರು : ಕಳೆದ ವರ್ಷ ಶೇ. 75 ಕ್ಕೂ ಹೆಚ್ಚು ಅಂಕಗಳನ್ನು ಪಡೆದು ತಾಂತ್ರಿಕ, ವೈದ್ಯಕೀಯ, ದಂತ ವೈದ್ಯಕೀಯ, ಸ್ನಾತ್ತಕೋತ್ತರ, ಕಾನೂನು, ಗಣಿತಶಾಸ್ತ್ರ (ಎಂ.ಎ.) ತರಗತಿಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಬಡ ಜೈನ ವಿದ್ಯಾರ್ಥಿಗಳಿಂದ ಗುಂಜಳ ಫ್ಯಾಮಿಲಿ ಎಜ್ಯುಕೇಷನ್ ಮತ್ತು ಶ್ರೀಮತಿ ಲಕ್ಷ್ಮಮ್ಮ ಬಂಡೆಪ್ಪಾ ಹರದರ ಚಾರಿಟಬಲ್ ಟ್ರಸ್ಟ್ (ರಿ.) ನ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕಳೆದ ವರ್ಷ ವಿದ್ಯಾರ್ಥಿ ವೇತನ ಪಡೆದವರು ಈ ವರ್ಷವೂ ಅರ್ಜಿಯನ್ನು ಕಳುಹಿಸಬೇಕು. ಡಿಪ್ಲೋಮೋ ವಿದ್ಯಾರ್ಥಿಗಳಿಗೆ ಈ ವರ್ಷವೂ ಸಹ ವಿದ್ಯಾರ್ಥಿವೇತನ ಕೊಡುವ ಪ್ರಬಂಧವಿಲ್ಲ.

ಆಸಕ್ತರು ಸ್ವ-ವಿಳಾಸ ಬರೆದು ರೂ. 10/- ಅಂಚೆ ಚೀಟಿ ಹಚ್ಚಿದ ಅಂಚೆ ಲಕೋಟೆಯನ್ನು ಆಗಸ್ಟ್ 30 ರೊಳಗೆ ಗುಂಜಳ ಫ್ಯಾಮಿಲಿ ಎಜ್ಯುಕೇಷನ್ ಮತ್ತು ಶ್ರೀಮತಿ ಲಕ್ಷ್ಮಮ್ಮ ಬಂಡೆಪ್ಪಾ ಹರದರ ಚಾರಿಟಬಲ್ ಟ್ರಸ್ಟ್ (ರಿ.) ಲಕ್ಷ್ಮಿಕುಂಜ, ನಂ.95, 7ನೇ ಮೈನ್ ಕಾರ್ಡ್ ರಸ್ತೆ, ವಿಜಯನಗರ, ಬೆಂಗಳೂರು-560040 ಈ ವಿಳಾಸಕ್ಕೆ ಕಳುಹಿಸಬೇಕೆಂದು ಮ್ಯಾನೇಜಿಂಗ್ ಟ್ರಸ್ಟಿ ಬ್ರಿಗೇಡಿಯರ್ ಡಿ.ಕೆ. ಗುಂಜಾಳರವರು ತಿಳಿಸಿದ್ದಾರೆ. ಸಂಪರ್ಕ : 9845335120.

ಅಂಚಿತಾ ಡಿ. ಜೈನ್ ತಾಲ್ಲೂಕಿಗೆ ಪ್ರಥಮ

ಬೆಳ್ತಂಗಡಿ : ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ಇವರು ನಡೆಸಿದ ವಸ್ತುಚಿತ್ರಣ, ಸ್ಮರಣಚಿತ್ರಣ, ಪ್ರಕೃತಿ ಮತ್ತು ವರ್ಣಚಿತ್ರಣ, ಭೂಮಿತಿ ರೇಖಾಕೃತಿ, ನಕ್ಷೆ ಮತ್ತು ವರ್ಣ ಚಿತ್ರಣ, ಸರಳಗೈ ಚಿತ್ರಣದ ವಿಷಯಾಧಾರಿತ ಡ್ರಾಯಿಂಗ್ ಗ್ರೇಡ್ ಲೋಯರ್ ಪರೀಕ್ಷೆಯಲ್ಲಿ ಶ್ರೀ ಧ. ಮಂ. ಆಂಗ್ಲ ಮಾಧ್ಯಮ ಶಾಲೆ ಉಜಿರೆಯ 10ನೇ ತರಗತಿ ಅಂಚಿತಾ ಡಿ. ಜೈನ್ ಬೆಳ್ತಂಗಡಿ ತಾಲ್ಲೂಕಿಗೆ ಪ್ರಥಮ ಸ್ಥಾನ ಗಳಿಸಿಕೊಟ್ಟಿದ್ದಾರೆ. ಇವರಿಗೆ ಈ ಶಾಲಾ ಚಿತ್ರಕಲಾ ಶಿಕ್ಷಕ ರವಿಚಂದ್ರರವರು ತರಬೇತಿ ನೀಡಿರುತ್ತಾರೆ.

ಅಂಚಿತಾರವರು ಮಂಜಾಲಕಟ್ಟೆಯ ಸರಕಾರಿ ಪದವಿ ಪೂರ್ವ ಕಾಲೇಜಿನ ಕಲಾಶಿಕ್ಷಕರಾದ ಧರಣೇಂದ್ರ ಜೈನ್ ಮತ್ತು ಅನುಪ ದಂಪತಿಗಳ ಸುಪುತ್ರಿಯಾಗಿರುತ್ತಾರೆ. ಈಕೆ ಈಗಾಗಲೇ ಭರತನಾಟ್ಯ ಜ್ಯೂನಿಯರ್ ಪರೀಕ್ಷೆಯಲ್ಲೂ ಉತ್ತಮ ಸಾಧನೆಯನ್ನು ಮಾಡಿರುತ್ತಾರೆ.

ವಿದ್ಯಾರ್ಥಿ ನಿಲಯಕ್ಕೆ ಪ್ರವೇಶಾವಕಾಶ

ಗದಗ : ಇಲ್ಲಿಯ ಶಿವಾನಂದ ನಗರ ಕಳಸಾಪೂರ ರಸ್ತೆಯಲ್ಲಿರುವ (ಬಯಲು ಆಂಜನೇಯ ದೇವಸ್ಥಾನ ಹಾಗೂ ಡಿ. ದೇವರಾಜ ಅರಸು ವಿದ್ಯಾರ್ಥಿ ನಿಲಯದ ಹತ್ತಿರ) ಶ್ರೀ ಶಾಂತಿನಾಥ ದಿಗಂಬರ ಜೈನ ಮಂದಿರದ ಆವರಣದಲ್ಲಿರುವ ಶಾಂತಿನಾಥ ದಿಗಂಬರ ಜೈನ ವಿದ್ಯಾರ್ಥಿ ನಿಲಯದಲ್ಲಿ ಎಸ್.ಎಸ್.ಎಲ್.ಸಿ., ಪಿ.ಯು.ಸಿ., ನಂತರ ವೃತ್ತಿ ಶಿಕ್ಷಣ (ಡಿಪ್ಲೋಮಾ, ಇಂಜಿನಿಯರಿಂಗ್, ನರ್ಸಿಂಗ್, ಬಿ.ಇ. ಬಿ.ಎ.ಎಂ.ಎಸ್., ಎಂ.ಡಿ., ಎಂ.ಬಿ.ಬಿ.ಎಸ್., ಎಂ.ಬಿ.ಎ.) ಮತ್ತು ಸ್ನಾತಕೋತ್ತರ ಪದವಿಗಳಲ್ಲಿ (ಎಂ.ಎ., ಎಂ.ಕಾಂ., ಎಂ.ಎಸ್ಸಿ., ಎಂ.ಎಸ್.ಡಬ್ಲು) ಶಿಕ್ಷಣವನ್ನು ಗದಗದಲ್ಲಿ ಮುಂದುವರೆಸುವ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿದೆ. ಊಟೋಪಚಾರದ ವ್ಯವಸ್ಥೆ ಇರುತ್ತದೆ. ವಸತಿ ನಿಲಯದ ಪ್ರಯೋಜನ ಬೇಕಾದ ಎಲ್ಲಾ ಸಮಾಜದ ವಿದ್ಯಾರ್ಥಿಗಳು ಜಿನಮಂದಿರದ ಅಧ್ಯಕ್ಷರನ್ನು ಸಂಪರ್ಕಿಸಲು ಕೋರಿದೆ. ಸಂಪರ್ಕ : 08372-234133, ಮೋ : 9481726935.

ಚಾತುರ್ಮಾಸ ಕಳಸ ಸ್ಥಾಪನಾ ಮಹೋತ್ಸವ

ದಾವಣಗೆರೆ : ಇಲ್ಲಿಯ ದಿಗಂಬರ ಜೈನ ಸಮಾಜದ ಚಾತುರ್ಮಾಸ ಕಮಿಟಿಯ ವತಿಯಿಂದ ಜು. 23 ರ ಶನಿವಾರದಂದು ಮುನಿಶ್ರೀ 108 ಪುಣ್ಯಸಾಗರ ಮಹಾರಾಜರು ತಮ್ಮ ಇಪ್ಪತ್ತನೇ ಚಾತುರ್ಮಾಸವನ್ನು ಆಚರಿಸಲಿದ್ದು, ಚಾತುರ್ಮಾಸ ಕಳಸ ಸ್ಥಾಪನಾ ಕಾರ್ಯಕ್ರಮವು ಶ್ರೀಕ್ಷೇತ್ರ ಸ್ವಾದಿ ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಭಟ್ಟಾಕಲಂಕ ಭಟ್ಟಾರಕ ಮಹಾಸ್ವಾಮೀಜಿಗಳವರ ಸಾನಿಧ್ಯದಲ್ಲಿ ಮಧ್ಯಾಹ್ನ 2.00 ಕ್ಕೆ ದಾವಣಗೆರೆಯ ಶ್ರೀ 1008 ಆದಿನಾಥ ಜಿನಮಂದಿರದಲ್ಲಿ ನೆರವೇರಲಿದೆ.

ಅಂದು ಪ್ರಾರ್ಥನೆ ಮತ್ತು ಭಕ್ತಿ ಗೀತೆಯೊಂದಿಗೆ ಆರಂಭವಾಗಲಿರುವ ಕಾರ್ಯಕ್ರಮದಲ್ಲಿ ಗಣ್ಯ ಅತಿಥಿಗಳಿಂದ ಪರಮಪೂಜ್ಯರಿಗೆ ಶ್ರೀಫಲ ಸಮರ್ಪಣೆ, ಚಾತುರ್ಮಾಸದ ಬಗ್ಗೆ ಪ್ರಾಸ್ತಾವಿಕ ನುಡಿ, ಪೂಜ್ಯ ಶ್ರೀಗಳಿಂದ ಭಕ್ತಿ ಪಠಣ ಮತ್ತು ಪ್ರವಚನ, ಚಾತುರ್ಮಾಸ ಕಳಸ ಹರಾಜು, ಕಳಸ ಸ್ಥಾಪನೆ, ಪರಮಪೂಜ್ಯರಿಂದ ಮಂಗಳ ಪ್ರವಚನ ಮತ್ತು ಆಶೀರ್ವಚನ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ಧರ್ಮಬಂಧುಗಳು ಭಾಗವಹಿಸಿ ತನು-ಮನ-ಧನದಿಂದ ಸಹಕರಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವ ಮೂಲಕ ಪುಣ್ಯಭಾಗಿಗಳಾಗಬೇಕಾಗಿ ವಿನಂತಿ.

ಗುರುದೇವ ಪತ್ರಿಕೆಗೆ ಚಂದಾದಾರರಾಗಿರಿ

WWW.HOMBUJAPADMAVATI.ORG

ಜಿನ-ದನಿ

ದಂ ಸಣ ಮೂಲೋ ಧಮ್ಮೋ ಉಪ ಇಟ್ಠೋ ಜಿಣವರೇಹಿಂ ಸಿಸ್ಸಾಣಂ ।
ತಂ ಸೋಊಣ ಸಕಣ್ಣೇ ದಂಸಣಹೀಣೋ ಣ ವಂದಿವ್ವೋ ॥
–ಸಂಗ್ರಹ

ಅರ್ಥ : ಜಿನೇಶ್ವರರು ದರ್ಶನಮೂಲವಾದ ಧರ್ಮವನ್ನು ಉಪದೇಶಿಸಿದ್ದಾರೆ. ಭವ್ಯರಾದವರು ಸಮ್ಯಗ್ದರ್ಶನ ರಹಿತವಾದುದನ್ನು ವಂದಿಸಲು ಅರ್ಹವಲ್ಲ ಎಂದು ತಿಳಿಯುವುದು.

ಬರಲಿರುವ ಪರ್ವದಿನಗಳು

ದುರ್ಮುಖಿನಾಮ ಸಂವತ್ಸರದ ಜ್ಯೇಷ್ಠಮಾಸ ಕೃಷ್ಣಪಕ್ಷ ದ್ವಾದಶಿಯಿಂದ
ಆಷಾಢಮಾಸ ಶುಕ್ಲಪಕ್ಷ ತ್ರಯೋದಶಿಯವರೆಗೆ

ಆಷಾಡ ಮಾಸ

ಜು.18 ಸೋಮ–ಚತುರ್ದಶಿ–ಮೂಲ, ಶ್ರೀಕ್ಷೇತ್ರ ಹೊಂಬುಜದಲ್ಲಿ ವಿಶೇಷ ಪೂಜೆ

ಜು. 19 ಮಂಗಳ–ಹುಣ್ಣಿಮೆ–ಪೂ.ಷ, ಗುರುಪೂರ್ಣಿಮಾ

ಜು. 20 ಬುಧ–ಪ್ರತಿಪದ–ಉ.ಷಾ. ವೀರಶಾಸನ ಜಯಂತಿ

ಜು. 21 ಗುರು–ಬಿದಿಗೆ–ಶ್ರವಣ, ಭ॥ ವೃಷಭನಾಥರ ಗರ್ಭಕಲ್ಯಾಣ

ಜು. 25 ಸೋಮ–ಷಷ್ಠಿ–ಉ.ಭಾ, ಭ॥ ವಾಸುಪೂಜ್ಯರ ಗರ್ಭಕಲ್ಯಾಣ

ಜು. 26 ಮಂಗಳ–ಸಪ್ತಮಿ–ರೇವತಿ

ಜು. 27 ಬುಧ–ಅಷ್ಟಮಿ–ಅಶ್ವಿನಿ, ಭ॥ ವಿಮಲನಾಥರ ಮೋಕ್ಷಕಲ್ಯಾಣ

ಜು. 30 ಶನಿ–ಏಕಾದಶಿ–ಮೃಗಶಿರಾ

ಜು. 31 ಭಾನು–ದ್ವಾದಶಿ–ತ್ರಯೋದಶಿ–ಆರಿದ್ರಾ

ಆ. 01 ಸೋಮ–ಚತುರ್ದಶಿ–ಪುನರ್ವಸು

ಆ. 02 ಮಂಗಳ–ಅಮವಾಸೆ–ಪುಷ್ಯ

ಶ್ರಾವಣಮಾಸ

ಆ. 03 ಬುಧ–ಪ್ರತಿಪದ–ಆಶ್ಲೇಷಾ, ಗೃಹಪ್ರವೇಶಕ್ಕೆ ಉತ್ತಮ ದಿನ

ಆ. 05 ಶುಕ್ರ–ತದಿಗೆ–ಪೂರ್ವ, ಶ್ರೀಕ್ಷೇತ್ರ ಹೊಂಬುಜದಲ್ಲಿ ವಿಶೇಷ ಪೂಜೆ, ಸಂಪತ್ ಶುಕ್ರವಾರ

ಆ. 09 ಮಂಗಳ–ಷಷ್ಠಿ–ಚಿತ್ತಾ, ಮಂಗಳಗೌರಿ ವ್ರತ

ಆ. 10 ಬುಧ–ಸಪ್ತಮಿ–ಸ್ವಾತಿ, ಭ॥ ಪಾರ್ಶ್ವನಾಥರ ಮೋಕ್ಷಕಲ್ಯಾಣ ಮುಕುಟ ಸಪ್ತಮಿ, ಹೊಂಬುಜ ಕ್ಷೇತ್ರದ ಗುಡ್ಡದ ಬಸದಿಯಲ್ಲಿ ವಿಶೇಷ ಪೂಜೆ

ಆ. 12 ಶುಕ್ರ–ನವಮಿ–ಅನುರಾದ, ಶ್ರೀಕ್ಷೇತ್ರ ಹೊಂಬುಜದಲ್ಲಿ ವಿಶೇಷ ಪೂಜೆ, ಸಂಪತ್ ಶುಕ್ರವಾರ, ವರಮಹಾಲಕ್ಷ್ಮೀವ್ರತ

ಆ. 15 ಸೋಮ–ದ್ವಾದಶಿ–ಪೂ.ಷಾ. ಸ್ವಾತಂತ್ರ್ಯೋತ್ಸವ ದಿನಾಚರಣೆ

ಆ. 18 ಗುರು–ಹುಣ್ಣಿಮೆ–ಧನಿಷ್ಠ, ರಕ್ಷಾಬಂಧನ, ಹೊಂಬುಜದಲ್ಲಿ (ಜನಿವಾರದ ಹಬ್ಬ) ಯೋಜ್ಞೋಪವೀತ ಧಾರಣೆ.

ಆ.19 ಶುಕ್ರ–ಪ್ರತಿಪದ–ಶತಭಿಷ, ಶ್ರೀಕ್ಷೇತ್ರ ಹೊಂಬುಜದಲ್ಲಿ ವಿಶೇಷ ಪೂಜೆ, ಸಂಪತ್ ಶುಕ್ರವಾರ

WWW.HOMBUJAPADMAVATI.ORG

ಮಾಸಿಕ ಸಭೆ

ಶಿವಮೊಗ್ಗ : ಇಲ್ಲಿಯ ಜೈನ್ ಮಿಲನ್‌ನ ಮಾಸಿಕ ಸಭೆಯು ಜೂ. 26 ಭಾನುವಾರದಂದು ನಡೆಯಿತು. ಪದ್ಮಲತಾ ಹಾಗೂ ಮಾಲತಿ ಕುಭೇರಪ್ಪರವರ ಪ್ರಾರ್ಥನೆಯೊಂದಿಗೆ ಸಭೆಯು ಪ್ರಾರಂಭವಾಯಿತು. ಅಧ್ಯಕ್ಷತೆಯನ್ನು ಶಿವಮೊಗ್ಗದ ಜೈನ್ ಮಿಲನ್‌ನ ಅಧ್ಯಕ್ಷರಾದ ಯಶೋಧರ ಹೆಗ್ಡೆಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ದಿಗಂಬರ ಜೈನ ಸಮಾಜದ ಅಧ್ಯಕ್ಷರಾದ ಶ್ರೀ ಸಿರಸಪ್ಪ ಗೋಗಿ, ಮುಖ್ಯ ಉಪನ್ಯಾಸಕರಾಗಿ ಕಮಲಾ ನೆಹರೂ ಕಾಲೇಜಿನ ಅಸಿಸ್ಟೆಂಟ್ ಪ್ರೋ. ಸಂತೋಷ ಕುಮಾರ್ ಎಸ್.ಜಿ. ರವರು ಆಗಮಿಸಿದ್ದರು. ಇವರು "ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಜೈನರ ಕೊಡುಗೆಗಳು" ಎಂಬ ವಿಷಯದ ಬಗ್ಗೆ ವಿವರವಾಗಿ ತಿಳಿಸಿಕೊಟ್ಟರು. ಶ್ರೀ ಎಸ್.ಪಿ. ನಾಗರಾಜಪ್ಪರವರು ಸ್ವಾಗತಿಸಿದರು. ಶ್ರೀ ಅಪ್ಪಣ್ಣಜ್ಜರವರು ಉಪನ್ಯಾಸಕರ ಪರಿಚಯ ಮಾಡಿಕೊಟ್ಟರು. ಶ್ರೀ ಯಶೋಧರ ಹೆಗ್ಡೆಯವರು ಅತಿಥಿ ಉಪನ್ಯಾಸಕರಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು. ಸುಂದರ ಪ್ರಭುರವರು ವಂದಿಸಿದರು. ಪದ್ಮಕುಮಾರ್‌ರವರು ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.

ದಾನ ನೀಡಿದವರ ವಿವರ

ಶ್ರೀಕುಂದ ಕುಂದಾ ವಿದ್ಯಾಪೀಠಕ್ಕೆ ದಾನ ನೀಡಿದವರ ಶುಭನಾಮಾವಳಿಗಳು

1.	ಅರಿಂಜಯ ಶರಣ್ಯ, ಪೆರಿಂಜೆ	11,000=00
2.	ಮೇಘನ ಮಯೂರ ಅಧಿಕಾರಿ, ಮೂಡಬಿದ್ರೆ	5,000=00
3.	ರತೀಶ್ ವಿ.ಎಂ. ವೈನಾಡ್	5,000=00
4.	ಟಿ.ಎ. ಪಾಟೀಲ್, ತಮದಡ್ಡಿ	5,000=00
5.	ಅವಾಟೆ ಕುಟುಂಬ, ಇಚಲಕಾರಂಜಿ	5,000=00

ಗುರುದೇವ ಪತ್ರಿಕೆಯ ಅಜೀವ ಸದಸ್ಯರ ಶುಭನಾಮಾವಳಿಗಳು

1.	ವರುಣ್ ಕುಮಾರ್ ಡಿ. ಬೆಂಗಳೂರು	1,000=00
2.	ಶ್ರೀ ಅರಿಹಂತ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಗಮ, ಬೋರ್‌ಗಾವ್	1,000=00
3.	ಸುಕುಮಾರ್ ಧನಪಾಲ್ ಕಂಥೆ, ಅಂಕಲಿ	1,000=00
4.	ಅಶೋಕ ವಿ. ಉಪಾಧ್ಯೆ, ಸದಲಗಾ	1,000=00
5.	ವರ್ಧಮಾನ ಟ್ರೇಡಿಂಗ್ ಕಂ. ಬೆಳಗಾಂ	1,000=00
6.	ಅನಿಲ್ ಕುಮಾರ್ ಬನ್ನಪ್ಪ ಮುಗ್ಗಣ್ಣವರ್, ಮಹಿಷವಾಡಗಿ	1,000=00

ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮಿಗಳವರು
ದಾನ ನೀಡಿದವರಿಗೆ ಶುಭಾಶೀರ್ವಾದ ಮಾಡಿರುತ್ತಾರೆ

ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು : ಇಲ್ಲಿಯ ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್ ಕಳೆದ 27 ವರ್ಷಗಳಿಂದ ಅರ್ಹ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ/ ವಿದ್ಯಾರ್ಥಿ ವೇತನ ನೀಡುತ್ತಾ ಬಂದಿದೆ. ಟ್ರಸ್ಟಿನ ವಿದ್ಯಾರ್ಥಿ ವೇತನ ನಿಧಿಯಿಂದ ಹಿಂದಿನ ಸಾಲಿನಂತೆ 2016–17ನೇ ಸಾಲಿನಲ್ಲಿ ಪಿ.ಯು.ಸಿ. ನಂತರದ ತರಗತಿಗಳಲ್ಲಿ (ಪರಿಶಿಷ್ಟ ಜಾತಿ ಮತ್ತು ಪಂಗಡದವರನ್ನು ಬಿಟ್ಟು) ಈ ಕೆಳಕಂಡ ವಿಷಯಗಳಲ್ಲಿ ಅಭ್ಯಾಸಿಸುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲು ತೀರ್ಮಾನಿಸಿದೆ.

ಕರ್ನಾಟಕದ ಯಾವುದೇ ವಿಶ್ವವಿದ್ಯಾಲಯದಲ್ಲಿ ಜೈನಾಲಜಿ/ ಪ್ರಾಕೃತ, ಜೈನಾಗಮ ವಿಭಾಗದಲ್ಲಿ ಅಭ್ಯಾಸ ಮಾಡುವ ವಿದ್ಯಾರ್ಥಿಗಳು, ಶಾಸ್ತ್ರಿಗಳ ಜೀವನ ಮತ್ತು ಸಾಹಿತ್ಯದ ವಿಷಯದಲ್ಲಿ ಸಂಶೋಧನೆ ಮಾಡಲು ಮುಂದಾಗುವ ವಿದ್ಯಾರ್ಥಿಗಳು, ಮಹಾಪುರಾಣದಲ್ಲಿ ಅಂತರ್ಗತ ವಿಭಿನ್ನ ವಿಷಯಗಳ ಬಗ್ಗೆ ಸಂಶೋಧಿಸುವ, ಕರ್ನಾಟಕದಲ್ಲಿ ಕನ್ನಡ, ಸಂಸ್ಕೃತ, ಪ್ರಾಕೃತ ವಿಷಯ ತೆಗೆದುಕೊಂಡು ಎಂ.ಎ. ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು, ಕನ್ನಡವನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಂಡು ಬಿ.ಎ. ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು, ಸಂಗೀತ, ಭಜನೆ, ಜಿನಭಕ್ತಿ ಗೀತಗಾಯನದಲ್ಲಿ ಅಭಿರುಚಿಯಿದು, ವಿದ್ಯಾರ್ಥಿ ವೇತನ ಪಡೆಯಬೇಕೆಂದು ಅಭಿಲಾಷೆಯುಳ್ಳ ವಿದ್ಯಾರ್ಥಿಗಳು 5 ರೂ. ಸ್ಟಾಂಪ್ ಹಚ್ಚಿದ ಸ್ವ–ವಿಳಾಸ ಬರೆದ 9" x 4" ಲಕೋಟೆಯನ್ನು ಟ್ರಸ್ಟಿಗೆ ಕಳುಹಿಸಿ, ಓದುತ್ತಿರುವ ತರಗತಿ, ತಂದೆಯ ಹೆಸರು ನಮೂದಿಸಿ ಅರ್ಜಿ ಫಾರಂ ಪಡೆದು ಭರ್ತಿ ಮಾಡಿ ಟ್ರಸ್ಟಿನ ವಿಳಾಸಕ್ಕೆ ಅ. 26, 2016 ರೊಳಗೆ ಟ್ರಸ್ಟಿನ ಕಾರ್ಯಾಲಯ ತಲುಪುವಂತೆ ಕಳುಹಿಸಿಕೊಡಬೇಕು. ಪೋಸ್ಟಲ್ ಕವರ್, ಮನಿ ಆರ್ಡರ್, ರಿಜಿಸ್ಟರ್ ಅಂಚೆ, ಕೋರಿಯರ್ ಮೂಲಕ ಕಳುಹಿಸಿದ ಅರ್ಜಿಫಾರಂ ಪರಿಗಣಿಸುವುದಿಲ್ಲ. ಕಳೆದ ಸಾಲಿನಲ್ಲಿ ವಿದ್ಯಾರ್ಥಿ ವೇತನ ಪಡೆದವರೂ ಈ ಸಾಲಿಗೂ ಅರ್ಜಿ ಸಲ್ಲಿಸಬೇಕು. ಕಳೆದ ಸಾಲಿನಲ್ಲಿ ವಿದ್ಯಾರ್ಥಿ ವೇತನದ 'ಸ್ವೀಕೃತಿ' ಕಳುಹಿಸದಿರುವ ಅಭ್ಯರ್ಥಿಗಳು ಅರ್ಜಿಯನ್ನು ಪರಿಗಣಿಸಲಾಗುವುದು.

ದೇವಿ ಆರಾಧನೆ-ಪ್ರತಿಭಾ ಪುರಸ್ಕಾರ

"ಸದಾಚರಣೆಯಿಂದ ಜೀವನದ ಉನ್ನತಿ ಸಾಧ್ಯ" -ಪರಮಪೂಜ್ಯ ಸ್ವಸ್ತಿಶ್ರೀ ಲಕ್ಷ್ಮೀಸೇನ ಭಟ್ಟಾರಕ ಮಹಾಸ್ವಾಮೀಜಿ

ಹುಬ್ಬಳ್ಳಿ : "ಜೀವನದಲ್ಲಿ ಸದಾಚಾರ, ಸದ್ವ್ಯವಹಾರಗಳು ಇದ್ದರೆ ಮಾತ್ರ ಉನ್ನತಿಯನ್ನು ಸಾಧಿಸಲು ಸಾಧ್ಯ. ಸದಾಚಾರವಿಲ್ಲದ ಮನುಷ್ಯ ಅಲ್ಪ ಕಾಲದ ಸುಖ-ಸಂತೋಷಗಳನ್ನು ಪಡೆಯಬಹುದಾದರೂ ಅಂತಿಮವಾಗಿ ಆತ ಪತನ ಹೊಂದುವುದು ಖಂಡಿತ. ಧರ್ಮದ ಆಶ್ರಯವನ್ನು ಪಡೆದು ಧರ್ಮ ಮಾರ್ಗದಲ್ಲಿ ನಡೆಯಬೇಕು. ಮನುಷ್ಯ ಧರ್ಮಮಾರ್ಗದಲ್ಲಿ ನಡೆಯುವಂತಾಗಲೆಂದೇ ನಮ್ಮಲ್ಲಿ ಧಾರ್ಮಿಕ ಆಚರಣೆಗಳು ಬೆಳೆದು ಬಂದಿವೆ" ಎಂದು ಸಿಂಹನಗದ್ದೆ ಬಸ್ತಿಮಠದ ಪರಮಪೂಜ್ಯ ಸ್ವಸ್ತಿಶ್ರೀ ಲಕ್ಷ್ಮೀಸೇನ ಭಟ್ಟಾರಕ ಸ್ವಾಮೀಜಿಗಳವರು ಹೇಳಿದರು.

ಇಲ್ಲಿಯ ಕಂಚಗಾರ ಗಲ್ಲಿಯ ಭಗವಾನ್ ಶ್ರೀ ಆದಿನಾಥ ಜಿನಮಂದಿರದಲ್ಲಿ ಆದಿನಾಥ ಮಹಿಳಾ ಸಮಾಜವು ಆಯೋಜಿಸಿದ್ದ 'ಅಷ್ಟಭುಜಾನ್ವಿತೆ ಶ್ರೀ ಜ್ವಾಲಾಮಾಲಿನಿ ದೇವಿಯ ಆರಾಧನೆ ಮತ್ತು ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಪ್ರದಾನ' ಸಮಾರಂಭದಲ್ಲಿ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

WWW.HOMBUJAPADMAVATI.ORG

ನಿತ್ಯವಿಧಿ, ಭಗವಾನ್ ಶ್ರೀ ಆದಿನಾಥ, ಶ್ರೀ ಚಂದ್ರಪ್ರಭ, ಶ್ರೀ ನೇಮಿನಾಥ ಜಿನಬಿಂಬಗಳಿಗೆ ಪಂಚಾಮೃತ ಅಭಿಷೇಕ ನಂತರ ಶ್ರೀ ಜ್ವಾಲಾಮಾಲಿನಿ ದೇವಿಯ ಆರಾಧನೆಯನ್ನು ಪೂಜ್ಯರ ಮಾರ್ಗದರ್ಶನದಲ್ಲಿ ಭಕ್ತ ಸಮೂಹ ಶ್ರದ್ಧೆ, ಭಕ್ತಿಗಳಿಂದ ನೆರವೇರಿಸಿದರು. ಶ್ರೀ ವಿನೋದಕುಮಾರ ಶ್ರೀಮತಿ ನಯನ ಗೋಟಡಕಿ ದಂಪತಿಗಳು ಇಂದ್ರ ಇಂದ್ರಾಣಿಯರಾಗಿ ಶ್ರೀಮತಿ ಪ್ರೇಮಾ ಟೀಕಣ್ಣವರ, ಶ್ರೀಮತಿ ಅಜಿತ ರೋಖಡೆಯವರು ಸೇವಾರ್ಥದಾರರಾಗಿದ್ದರು.

ವರೂರು ನವಗ್ರಹ ತೀರ್ಥದ ಸ್ವಸ್ತಿಶ್ರೀ ಧರ್ಮಸೇನ ಭಟ್ಟಾರಕರು ವಿದ್ಯಾರ್ಥಿಗಳಿಗೆ ಹಿತ ನುಡಿಯುತ್ತ "ವಿದ್ಯೆ ಕಲಿಯುವ ಸಮಯದಲ್ಲಿ ವಿನಯ ಗುಣವನ್ನು ಅಳವಡಿಸಿಕೋಂಡು ಗುರುವಿನ ಮಾರ್ಗದರ್ಶನದಲ್ಲಿ ಶ್ರದ್ಧೆಯನ್ನು ಅರ್ಜಿಸಿದರೆ ಬದುಕು ಸಾರ್ಥಕವಾಗಬಲ್ಲದು" ಎಂದರು.

ಎಸ್.ಎಲ್.ಎಲ್.ಸಿ. ಪರೀಕ್ಷೆಗಳಲ್ಲಿ ಸಾಧನೆ ಮಾಡಿದ ಹಾಗೂ ವಿವಿಧ ಕ್ರೀಡೆಗಳಲ್ಲಿ ಸಾಧನೆ ಮಾಡಿದ ಸಮಾಜದ ವಿದ್ಯಾರ್ಥಿ, ವಿದ್ಯಾರ್ಥಿನಿಯರನ್ನು ಸನ್ಮಾನಿಸಲಾಯಿತು. ಪೂಜ್ಯ ಸ್ವಾಮೀಜಿಯವರ ಪಾದಪೂಜೆ ನೆರವೇರಿಸಿ ಭಕ್ತಿ ಸಮರ್ಪಿಸಲಾಯಿತು. ಆದಿನಾಥ ಮಹಿಳಾ ಸಮಾಜದ ಅಧ್ಯಕ್ಷೆ ತ್ರಿಶಲಾ ಮಾಲಗತ್ತಿ ಕಾರ್ಯಕ್ರಮವನ್ನು ನಿರ್ವಹಿಸಿದರು. ಆದಿನಾಥ ಟ್ರಸ್ಟ್ ಕಮೀಟಿ, ಆದಿನಾಥ ಮಹಿಳಾ ಸಮಾಜದ ಪದಾಧಿಕಾರಿಗಳು ಸದಸ್ಯರು, ಜೈನ ಸಮಾಜ ಬಂಧುಗಳು ಉಪಸ್ಥಿತರಿದ್ದರು.

ನಿವೃತ್ತ ನ್ಯಾಯಮೂರ್ತಿ ಎ.ಸಿ. ಕಬ್ಬಿನ್ ನಿಧನ

ಬೆಂಗಳೂರು : ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಹಾಗೂ ಕರ್ನಾಟಕ ಆಡಳಿತ ನ್ಯಾಯಮಂಡಳಿ (ಕೆಎಟಿ) ಮಾಜಿ ಅಧ್ಯಕ್ಷರೂ ಆಗಿದ್ದ ಅಜಿತ ಚಂದ್ರನಾಥ ಕಬ್ಬಿನ್ (71) ರವರು ಶುಕ್ರವಾರ ನಿಧನರಾದರು. ಅವರಿಗೆ ಪತ್ನಿ, ಮೂವರು ಪುತ್ರಿಯರು ಇದ್ದಾರೆ. ಬೆಳಗಾವಿ ಜಿಲ್ಲೆ ಸವದತ್ತಿಯಲ್ಲಿ 1945ರ ಡಿಸೆಂಬರ್ 20ರಂದು ಜನಿಸಿದ ಅವರು 1973ರಲ್ಲಿ ಮುನ್ಸೀಫರಾಗಿ ನ್ಯಾಯಾಂಗ ಸೇವೆಗೆ ಸೇರಿದರು. 1992ರ ಡಿಸೆಂಬರ್ 2ರಂದು ಜಿಲ್ಲಾ ನ್ಯಾಯಾಧೀಶರಾಗಿ ಹಾಗೂ 2003ರ ಸೆಪ್ಟಂಬರ್ 8ರಂದು ಹೆಚ್ಚುವರಿ ನ್ಯಾಯಾಮೂರ್ತಿಯಾಗಿ ನೇಮಕಗೊಂಡ ಅವರು 2004ರ ಸೆಪ್ಟಂಬರ್ 24 ರಂದು ಕಾಯಂ ನ್ಯಾಯಮೂರ್ತಿಯಾದರು. 2008 ರಿಂದ 2013 ರವರೆಗೆ ಕೆಎಟಿ ಅಧ್ಯಕ್ಷರಾಗಿ ಅವರು ಸೇವೆ ಸಲ್ಲಿಸಿದ್ದರು. ಮೃತರು ಶ್ರೀಕ್ಷೇತ್ರ ಹೊಂಬುಜದ ಅನನ್ಯ ಭಕ್ತರಾಗಿದ್ದರು. ಇವರ ಈ ಆಕಸ್ಮಿಕ ವಿಯೋಗದಿಂದ ಸಮಾಜಕ್ಕೆ, ಬಂಧು-ಬಾಂಧವರಿಗೆ ತುಂಬಲಾರದ ನಷ್ಟವಾಗಿದೆ. ಇವರ ಸಾವಿಗೆ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ದೇವೆಂದ್ರಕೀರ್ತಿ ಭಟ್ಟಾರಕ ಸ್ವಾಮಿಜಿಗಳವರು ಸಂತಾಪ ಸೂಚಿಸಿ, ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಹಾಗೂ ಅವರ ಕುಟುಂಬಕ್ಕೆ ಅವರ ಅಗಲಿಕೆಯನ್ನು ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ನೀಡಲೆಂದು ತಿಳಿಸಿದರು.

15ನೇ ವಾರ್ಷಿಕೋತ್ಸವ, ಪ್ರಶಸ್ತಿ ಪ್ರದಾನ ಸಮಾರಂಭ-ವಿಚಾರ ಸಂಕೀರಣ

"ಸುಮವಸಂತ ಪ್ರಶಸ್ತಿ-ಡಾ. ಟಿ.ಆರ್. ಜೋಡಟ್ಟಿ, ಶ್ರೇಯೋಭದ್ರ ಪ್ರಶಸ್ತಿ- ಶ್ರೀಮತಿ ನಿರ್ಮಲಮ್ಮರವರಿಗೆ"

ಬೆಂಗಳೂರು : ಇಲ್ಲಿಯ ಸಾಲಿಗ್ರಾಮ ಜೈನ ಮಿತ್ರ ಮಂಡಳಿಯ 15 ವಾರ್ಷಿಕೋತ್ಸವ, ಪ್ರಶಸ್ತಿ ಸಮಾರಂಭ ಹಾಗೂ ವಿಚಾರ ಸಂಕೀರಣವನ್ನು ಬೆಂಗಳೂರಿನ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನ ವಾಡಿಯಾ ಸಭಾಂಗಣದಲ್ಲಿ ಜು. 24, 2016ನೇ ಭಾನುವಾರದಂದು ಏರ್ಪಡಿಸಲಾಗಿದೆ.

ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ದಿ. ಎಸ್.ಬಿ. ವಸಂತರಾಜಯ್ಯ ಸ್ಮರಣಾರ್ಥ 'ಸುಮವಸಂತ' ಪ್ರಶಸ್ತಿಯನ್ನು ಬೆಳಗಾವಿಯ ಸಾಹಿತಿ ಡಾ. ಟಿ.ಆರ್. ಜೋಡಟ್ಟಿಯವರಿಗೆ ಹಾಗೂ 'ಶ್ರೇಯೋಭದ್ರ' ಪ್ರಶಸ್ತಿ'ಯನ್ನು ಸಾಮಾಜಿಕ ಕಾರ್ಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುವ ಬೆಂಗಳೂರಿನ ಶ್ರೀ ಚಕ್ರೇಶ್ವರಿ ಮಹಿಳಾ ಸಮಾಜ ಮತ್ತು ಭಗವಾನ್ ಶ್ರೀ ಆದಿನಾಥ ಚೈತ್ಯಾಲಯದ ಅಧ್ಯಕ್ಷರಾದ ಶ್ರೀಮತಿ ನಿರ್ಮಲಮ್ಮ ಇವರುಗಳು ಆಯ್ಕೆಯಾಗಿರುತ್ತಾರೆ. ಇದೇ ಸಂದರ್ಭದಲ್ಲಿ ಸ್ತ್ರೀ ರೋಗ ತಜ್ಞರು ಹಾಗೂ ಲೇಖಕರಾದ ಡಾ. ನೀರಜ ನಾಗೇಂದ್ರ ಕುಮಾರ್‌ರವರನ್ನು ಅಭಿನಂದಿಸಲಾಗುವುದು.

ಕಾರ್ಯಕ್ರಮದಲ್ಲಿ ಖ್ಯಾತ ವಿದ್ವಾಂಸರು ಹಾಗೂ ಸಂಶೋಧಕರು ಆದ ನಾಡೋಜ ಡಾ. ಎಂ. ಚಿದಾನಂದ ಮೂರ್ತಿಯವರು ಅಧ್ಯಕ್ಷತೆಯನ್ನು ವಹಿಸಿ ಪುರಾಣಗಳಲ್ಲಿ ಬಾಹುಬಲಿ ಎಂಬ ವಿಷಯದ ಬಗ್ಗೆ ಮಾತನಾಡಲಿದ್ದಾರೆ. ವಿಶ್ರಾಂತ ಇತಿಹಾಸ ಪ್ರಾಧ್ಯಾಪಕರು ಮತ್ತು ಶ್ರವಣಬೆಳಗೊಳದ ಪ್ರಾಕೃತ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಪ್ರೋ. ಜೀವಂಧರ್‌ಕುಮಾರ್ ಹೊತಪೇಟಿಯವರಿಂದ ಬಾಹುಬಲಿಯ ವ್ಯಕ್ತಿತ್ವದ ಕುರಿತು ಹಾಗೂ ಬೆಂಗಳೂರಿನ ರೇಣುಕಾಚಾರ್ಯ ಕಾಲೇಜಿನ ಪ್ರಾಧ್ಯಾಪಕರಾದ ಶ್ರೀಮತಿ ಉಷಾರಾಣಿ ಮಹಾವೀರ್‌ರವರಿಂದ ಶಿಲ್ಪಕಲೆಯಲ್ಲಿ ಬಾಹುಬಲಿ ಎಂಬ ವಿಷಯದ ಕುರಿತು ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿದೆ.

'ತ್ರಿಲೋಕ ದರ್ಶನ' ಚಿತ್ರ ಸಹಿತ ಪವರ್ ಪಾಯಿಂಟ್ ಪ್ರದರ್ಶನ

ಮೈಸೂರು : ಇಲ್ಲಿಯ ಶ್ರೀ ಕೋಟೆ ಶಾಂತಿನಾಥ ಬಸದಿಯಲ್ಲಿ ಶ್ರೀ ಪದ್ಮಶ್ರೀ ಮಹಿಳಾ ಸಮಾಜದ ವತಿಯಿಂದ ಜೂ. 6, 2016 ರಂದು ಮಧ್ಯಾಹ್ನ 3.00 ಗಂಟೆಗೆ ಸರಿಯಾಗಿ "ತ್ರಿಲೋಕ ದರ್ಶನ" ಚಿತ್ರ ಸಹಿತ ಫವರ್ ಪಾಯಂಟ್ ಮೂಲಕ ಸುಂದರ ಹಾಗೂ ಸವಿರವಾಗಿ ಶ್ರಾವಕರಿಗೆ ತೋಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಬೆಂಗಳೂರಿನ ಜೆ. ಪದ್ಮನಾಭಯ್ಯ ಹಾಗೂ ಶ್ರೀಮತಿ ಯಶಸ್ವತಾ ದೇವಿಯವರು ಆಗಮಿಸಿ ಚಿತ್ರಸಹಿತ ತೋರಿಸುತ್ತ ತಾವೇ ಸ್ವಂತ ವಿವರಣೆಯನ್ನು ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಖಿಲ ಕರ್ನಾಟಕ ಮಹಿಳಾ ಒಕ್ಕೂಟದ ಅಧ್ಯಕ್ಷರು ಹಾಗೂ ಪದ್ಮಶ್ರೀ ಮಹಿಳಾ ಸಮಾಜದ ಅಧ್ಯಕ್ಷರೂ ಆದ ಶ್ರೀಮತಿ ಶೀಲಾ ಅನಂತರಾಜ್‌ರವರು ವಹಿಸಿಕೊಂಡಿದ್ದರು. ಕಾರ್ಯಕ್ರಮಕ್ಕೆ ಸಹಕಾರ ನೀಡಿದ ಎನ್. ಪ್ರಸನ್ನ ಕುಮಾರ್‌ರವರು ಹಾಗೂ ಅಂದಿನ ಉಪಹಾರದ ವ್ಯವಸ್ಥೆಯನ್ನು ವಹಿಸಿಕೊಂಡಿದ್ದ ಶ್ರೀಮತಿ ನಿಶ್ಚಲ ಕುಮಾರಿ ಮತ್ತು ಮಕ್ಕಳು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸುಮಾರು 400 ಜನ ವೀಕ್ಷಿಸಿ ಪುಣ್ಯಭಾಗಿಗಳಾದರು. ಸಮಾಜದ ವತಿಯಿಂದ ದಂಪತಿಗಳನ್ನು ಸನ್ಮಾನಿಸಲಾಯಿತು.

ಪ್ರಾರ್ಥನೆಯನ್ನು ಜಯಲಕ್ಷ್ಮಿಯವರು ನಡೆಸಿಕೊಟ್ಟರು. ಶ್ರೀಮತಿ ಅರುಣಾ ಪ್ರಕಾಶ್‌ರವರು ಸ್ವಾಗತಿಸಿದರು. ಮುಖ್ಯ ಅತಿಥಿಗಳ ಪರಿಚಯವನ್ನು ಶ್ರೀಮತಿ ಸುಧಾ ಧರಣೇಂದ್ರರವರು ಮಾಡಿಕೊಟ್ಟರು. ಶ್ರೀಮತಿ ವೈಶಾಲಿ ಪ್ರಭುರವರು ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು. ಪದ್ಮ ಧನ್ಯಕುಮಾರ್‌ರವರು ನಿರೂಪಿಸಿದರು.

ಶ್ರೀ ಕ್ಷೇತ್ರ ಹೊಂಬುಜ

ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ

ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ

ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು

ಜಗನ್ಮಾತೆ ಶ್ರೀ ಪದ್ಮಾವತಿ ದೇವಿ

ಶುಭಾಶೀರ್ವಚನ ಶ್ರೀ ಕ್ಷೇತ್ರ ಹೊಂಬುಜ

"ಸಾಧನೆ ಮತ್ತು ಆರಾಧನೆಯ ವರ್ಷಾಯೋಗ"

ಧರ್ಮಬಂಧುಗಳೇ,

ನಾವೆಲ್ಲಾ ವರ್ಷಾಯೋಗದ ಹೊಸ್ತಿಲಲ್ಲಿ ಇದ್ದೇವೆ. ಎಲ್ಲೆಡೆ ಮಳೆ ಆರಂಭವಾಗಿದೆ. ಹಳ್ಳಿಗಳಲ್ಲಿ ಕೃಷಿ ಪ್ರಾರಂಭವಾಗಿದೆ. ರೈತರು ಉತ್ತಮ ಬೀಜ ಬಿತ್ತಿ ಒಳ್ಳೆಯ ಫಸಲನ್ನು ತೆಗೆಯುವ ಆಲೋಚನೆಯೊಂದಿಗೆ ಕೆಲಸದಲ್ಲಿ ತೊಡಗಿದ್ದಾರೆ. ವರ್ಷಾಯೋಗ ಉತ್ತಮವಾಗಿದ್ದಲ್ಲಿ ಸಫಲತೆ ನಿಶ್ಚಿತ. ವರ್ಷಾಯೋಗವು ಕೃಷಿಕರಿಗೆ ಹೇಗೆ ಶುಭಯೋಗವೋ ಅದೇ ರೀತಿ ಆಸ್ತಿಕ ಮಹಾಶಯರಿಗೂ ಅಮೃತ ಘಳಿಗೆ. ಸಾಧು-ಸಂತರು, ಇದೇ ಸಂದರ್ಭದಲ್ಲಿ ಒಂದೆಡೆ ವಾಸ್ತವ್ಯ ಮಾಡಿ ಸಾಧನೆ ಮಾಡುತ್ತಾರೆ. ನಮ್ಮ ಭಾರತ ಭೂಮಿ ಋಷಿ-ಮುನಿಗಳ ಸಾಧನೆಯಿಂದಲೇ ಪವಿತ್ರವೂ, ಪ್ರಭಾವಕವೂ ಆಗಿರುವುದು. ಮೋಕ್ಷ ಮಾರ್ಗ ಸಾಧಕರಿಗೆ ಉತ್ತಮವಾದ ಸತ್ಸಂಗದ ಅಗತ್ಯತೆಯಿರುತ್ತದೆ. ಒಂದಾನೊಂದು ಕಾಲವಿತ್ತು ಮುನಿಗಳು, ತ್ಯಾಗಿ ಜನರು ಕಾಡಿನಲ್ಲಿ, ಗುಹೆಗಳಲ್ಲಿ ತೀರ್ಥಕ್ಷೇತ್ರಗಳಲ್ಲಿ ಇದ್ದು ತಮ್ಮ ಆತ್ಮ-ಸಾಧನೆ ಮಾಡುತ್ತಿದ್ದರು. ಕಠಿಣ ತಪಸ್ಸನ್ನು ಮಾಡುತ್ತಾ ನಿರಪೇಕ್ಷೆಯಿಂದ ಧ್ಯಾನ ಮಾಡುತ್ತಿದ್ದರು. ಆಗ ಇಂತಹ ಮಹಾಪುರುಷರ ದರ್ಶನ ಭಾಗ್ಯವೇ ದುರ್ಲಭವಾಗಿರುತ್ತಿತ್ತು. ಕಾಲ ಬದಲಾಗಿದೆ. ಮೋಕ್ಷ ಸಾಧನೆಗೆ ಕಠಿಣ ತಪಸ್ಸು ಮಾಡುವುದು ಈ ಕಾಲದಲ್ಲಿ ಕಷ್ಟಸಾಧ್ಯವಾಗಿದೆ. ಹಾಗಾಗಿ ಸಾಧು-ಸಂತರು ಸಮಾಜದ ಸಮುದಾಯದ ನಡುವೆ ಇದ್ದು ಧರ್ಮ ಪ್ರಭಾವನೆಯ ಜೊತೆಗೆ ಮೋಕ್ಷ ಮಾರ್ಗದ ಪ್ರಯತ್ನದಲ್ಲಿ ಇದ್ದಾರೆ. ಜನರೂ ತಾವಿದ್ದಲ್ಲಿ ಧರ್ಮ ಮಾರ್ಗದಲ್ಲಿ ನಡೆಯುವಂತೆ ಸದಾ ಪ್ರೇರಣೆ-ಮಾರ್ಗದರ್ಶನ ಕೊಡುವವರು ಬೇಕೆಂದು ಅಪೇಕ್ಷಿಸುತ್ತಾರೆ.

ವರ್ಷಾಕಾಲದ ಈ ಚಾತುರ್ಮಾಸ ಸಮಯವು ಸಾಧಕರಿಗೆ ಒಂದು ರೀತಿ ಯೋಗ್ಯವಾಗಿದ್ದು, ವ್ರತ-ನಿಯಮಗಳಿಗೆ ಬದ್ಧರಾಗಿ ಆತ್ಮಕಲ್ಯಾಣದ ಹಾದಿಯಲ್ಲಿ ಮುನ್ನಡೆಯುತ್ತಾರೆ. ಈಗಿನ ಸಮಯದಲ್ಲಿ ಏಕಾಗ್ರ ಚಿತ್ತರಾಗಿ ಕಠಿಣ ತಪಸ್ಸು ಮಾಡುವುದು ಕಷ್ಟವೇ ಸರಿ. ಆದರೂ ಶಕ್ತಿಗನುಸಾರವಾಗಿ ತಪ ಸಾಧನೆಯನ್ನು ಮಾಡುವ ಸಾಧಕರು ಕಣ್ಮುಂದೆ ಇದ್ದಾರೆ. ಆಷಾಡ ಅಷ್ಟಾಹ್ನಿಕ ಪರ್ವದಿಂದ ಪ್ರತಿ ತಿಂಗಳು ಒಂದಲ್ಲ ಒಂದು ವ್ರತ-ನೋಂಪಿಗಳು ಈ ಚಾತುರ್ಮಾಸದ ಅವಧಿಯಲ್ಲಿ ಬರುತ್ತವೆ. ಮುನಿಗಳು-ತ್ಯಾಗಿಗಳು ಸದಾ ಈ ಮಾರ್ಗದಲ್ಲಿ ಮುನ್ನಡೆಯುವಂತೆ ಪ್ರೇರೇಪಿಸುತ್ತಾ ಇರುತ್ತಾರೆ. ಶ್ರಾವಕರಿಗೆ ಇದೊಂದು ಆರಾಧನೆಯ ಸಮಯ. ಸದಾ ಉತ್ಸಾಹದೊಂದಿಗೆ ಇರಲು ಸಕಾರಾತ್ಮಕ ಶಕ್ತಿಯನ್ನು ವೃದ್ಧಿಸಿಕೊಳ್ಳಲು ಸತ್ಸಂಗದ ಜೊತೆಗೆ ದೇವರ ಆರಾಧನೆ, ಭಕ್ತಿ ಮಾಡುವ ಸುಯೋಗ. ಅಷ್ಟಾಹ್ನಿಕ ಪರ್ವ, ಷೋಡಶಕಾರಣ ಪರ್ವ, ದಶಲಕ್ಷಣ ಪರ್ವ, ಅನಂತವ್ರತ ಹೀಗೆ ಅನೇಕ ಪರ್ವಗಳ ಮೂಲಕ ಶ್ರಾವಕರು ಭಗವಂತನ ಆರಾಧನೆ ಮಾಡುವ ಮೂಲಕ ಆತ್ಮಾರಾಧನೆ ಮಾಡುವ ಅವಕಾಶ ಭಾರತದ ಅನೇಕ ಗ್ರಾಮ-ನಗರ ಪ್ರದೇಶಗಳಲ್ಲಿ ಚಾತುರ್ಮಾಸವನ್ನು ಚತುರ್ವಿಧ ಸಂಘಗಳು ಆಚರಿಸುತ್ತಾರೆ. ಅವಕಾಶ ಸಿಕ್ಕಾಗಲೆಲ್ಲಾ ಧರ್ಮಾರಾಧನೆಯನ್ನು ಮಾಡುತ್ತಾ ಜೀವನವನ್ನು ಸಾರ್ಥಕ ಪಡಿಸಿಕೊಳ್ಳಬೇಕು.

॥ ಶುಭವಾಗಲಿ ॥

"ಪ್ರಾಕೃತ ಪರಿಚಯ"

ಮುಂದುವರೆದ ಭಾಗ...

1) ನೀವಿಬ್ಬರು ನಗುತ್ತೀರಿ
ಪ್ರಾ- ತುಜ್ಝೆ ಹಸಿಸ್ಸಹ
2) ಅವರೆಲ್ಲ ಕುಣಿಯುತ್ತಾರೆ.
ಪ್ರಾ- ತೇ ಣಚ್ಚಿಸ್ಸಿಂತಿ
3) ನಾನು ನಿನಗೆ ಪ್ರಣಾಮ ಮಾಡುತ್ತೇನೆ
ಪ್ರಾ- ಅಹಂ ತುಮಂ ಪಣಮಾಮಿ
4) ಅವಳು ನನ್ನನ್ನು ನೋಡುತ್ತಾಳೆ
ಪ್ರಾ- ಸಾ ಮಮ ದೇಕ್ಖ ಇ
5) ನೀವು ನೀರು ಕುಡಿಯಿರಿ
ಪ್ರಾ- ತುಮಂ ಜಲಂ ಪಿವ ಹಿ

ಸರ್ವನಾಮ

1) ನೀವು- ತುಜ್ಝ
2) ಅವರು-ತೇ
3) ನಾನು- ಅಹಂ
4) ಅವಳು- ಸಾ
5) ನೀವು- ತುಮಂ

WWW.HOMBUJAPADMAVATI.ORG

ಕ್ರಿಯಾಪದ

ಹಸ- ನಗು
ಣಚ್ಚ- ಕುಣಿ
ಪಣಾಮ- ಪ್ರಣಾಮ

ಮುಂದುವರೆಯುವುದು)

ಮುಂಬೈನ ಪ್ರಾಚೀನ ಬಸದಿಯ ಜೀರ್ಣೋದ್ಧಾರ ನಿಮಿತ್ತ ನಡೆದ ವಿಶೇಷ ಪೂಜಾ ಕೈಕರ್ಯಗಳು ಹಾಗೂ ಧಾರ್ಮಿಕ ಸಭಾ ಕಾರ್ಯಕ್ರಮವು ಮುನಿಶ್ರೀಗಳವರ ಪಾವನ ಸಾನಿಧ್ಯ ಹಾಗೂ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರ ದಿವ್ಯ ನೇತೃತ್ವದಲ್ಲಿ ನೆರವೇರಿತು.

ದಿಗಂಬರ ಜೈನ ಬೋರ್ಡಿಂಗಿಗೆ ಶ್ರೀಗಳವರ ಪುರಪ್ರವೇಶ

ಹುಬ್ಬಳ್ಳಿ : ಇಲ್ಲಿಯ ದಿಗಂಬರ ಜೈನ್ ಬೋರ್ಡಿಂಗಿಗೆ ಜೂ. 24, 2016 ರಂದು ಸಂಜೆ 6 ಘಂಟೆಗೆ ಪರಮಪೂಜ್ಯ ಸ್ವಸ್ತಿಶ್ರೀ ಲಕ್ಷ್ಮೀಸೇನ ಭಟ್ಟಾರಕ ಮಹಾಸ್ವಾಮೀಜಿಯವರನ್ನು ಪೂರ್ಣ ಕುಂಭ ಹಾಗೂ ಮಂಗಳವಾದ್ಯಗಳೊಂದಿಗೆ ಸ್ವಾಗತಿಸಲಾಯಿತು. ನಂತರ ಚಂದ್ರಪ್ರಭ ತೀರ್ಥಂಕರ ದರ್ಶನ ಪಡೆದು ಸಭಾ ಭವನಕ್ಕೆ ಆಗಮಿಸಿದರು.

ಕಾರ್ಯಕ್ರಮವು ಶ್ರೀಮತಿ ಆರತಿ ಸುದರ್ಶನವರಿಂದ ಜಿನಸ್ತುತಿಯೊಂದಿಗೆ ಪ್ರಾರಂಭವಾಯಿತು. ಸಭೆಯ ಸಾನಿಧ್ಯ ವಹಿಸಿದ ಪರಮಪೂಜ್ಯ ಮಹಾಸ್ವಾಮೀಜಿಗಳವರು ವೇದಿಕೆ ಮೇಲೆ ಇದ್ದ ಎಲ್ಲ ಗಣ್ಯರೊಂದಿಗೆ ಉದ್ಘಾಟಿಸಲಾಯಿತು. ನಂತರ ಬೋರ್ಡಿಂಗ ಪದಾಧಿಕಾರಿಗಳು ಬ್ರಾಹ್ಮಿಳಾ ಮಹಿಳಾ ಪರಿಷತ್ತ ಅಧ್ಯಕ್ಷೆ ಶ್ರೀಮತಿ ಪಂಕಜಾ ಮ. ಸೂಜಿ ಹಾಗೂ ಸಂಗಡಿಗರಿಂದ ಪಾದ ಪೂಜೆ ನೆರವೇರಿಸಲಾಯಿತು.

ಸಭೆಯ ಅಧ್ಯಕ್ಷತೆಯನ್ನು ಶ್ರೀ ಮಹಾವೀರ ಎನ್. ಸೂಜಿಯವರು ವಹಿಸಿದ್ದರು. ಅಥಿತಿಗಳಾಗಿ ಶ್ರೀ ದತ್ತಾ ಸಿ. ಡೋರ್ಲೆ, ಜಿ.ಜಿ. ಲೋಬೋಗೋಳ, ವಿದ್ಯಾಧರ ಪಿ. ಪಾಟೀಲ, ವಿಮಲ ಸಂಗಮಿ, ಆರ್.ಟಿ. ಅಣ್ಣಿಗೇರಿ, ಮಹಾವೀರ ಕುಂದೂರ, ದಯಾನಂದ ಕುಂದೂರ ವಹಿಸಿದ್ದರು.ಸಭೆಯಲ್ಲಿ ಜಿ.ಜಿ. ಲೋಬೋಗೋಳರವರು ಪ್ರಾಸ್ತಾವಿಕ ಭಾಷಣದಲ್ಲಿ ಸ್ವಾಮೀಜಿಯವರ ಪರಿಚಯ ಹಾಗೂ ಸ್ವಾಗತವನ್ನು ಮಾಡಿದರು.

ಸ್ವಾಮೀಜಿಯವರಿಗೆ ದಿಗಂಬರ ಜೈನ ಬೋರ್ಡಿಂಗ ಪದಾಧಿಕಾರಿಗಳು ಹಾಗೂ ಹಳೇಯ ವಿದ್ಯಾರ್ಥಿಗಳ ಸಂಘದಿಂದ ಸತ್ಕರಿಸಲಾಯಿತು. ತದನಂತರ ವಿವಿಧ ಸಮಾಜದ ಸಂಘಟನೆಗಳು ಕೂಡ ಸನ್ಮಾನಿಸಿದರು. ಲೈನ್ಸ್ ಪರಿವಾರ ಹುಬ್ಬಳ್ಳಿ ಇದರಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಶ್ರೀ ಮಹಾವೀರ ಪಿ. ಕುಂದೂರರವರನ್ನು ಸನ್ಮಾನಿಸಲಾಯಿತು. ನಂತರ ಬೋರ್ಡಿಂಗಿಗೆ ದಾನ ಮಾಡಿದ ಡಾ॥ ಬಿ.ಎನ್. ಪಾಟೀಲರನ್ನು ಸನ್ಮಾನಿಸಲಾಯಿತು. ಸ್ವಾಮೀಜಿಯವರ ಆಶೀರ್ವಚನದಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ಸಣ್ಣ ಮಕ್ಕಳಿಗೆ ಧರ್ಮ ಸಂಸ್ಕಾರದಿಂದ ನಡೆಯಲು ತಿಳಿಸಿದರು. ಸಂಸ್ಕಾರಯುಕ್ತ ಸಮಾಜವಾದರೆ ಮುಂದೆ ಯಾವುದೇ ಅಹಿತಕರ ಘಟನೆ ನಡೆಯುವುದಿಲ್ಲವೆಂದು ನುಡಿದರು.

ಶ್ರೀ ದತ್ತಾ ಡೋರ್ಲೆಯವರು ಮಾತನಾಡಿ ಒಳ್ಳೆಯ ಸಂಸ್ಕಾರ ನೀಡಿ ಮೂರು ಜನ ಭಟ್ಟಾರಕ, ಮೂರು ರತ್ನಗಳನ್ನು ಸಮಾಜಕ್ಕೆ ನೀಡಿದ ಪೂಜ್ಯ ಚಾರುಕೀರ್ತಿ ಭಟ್ಟಾರಕರನ್ನು ಕೊಂಡಾಡಿದರು.

ಅಧ್ಯಕ್ಷರಾದ ಶ್ರೀ ಮಹಾವೀರ ಎನ್. ಸೂಜಿಯವರು ಅಧ್ಯಕ್ಷೀಯ ಭಾಷಣದಲ್ಲಿ ದಿಗಂಬರ ಜೈನ ಬೋರ್ಡಿಂಗ್ ಬಳ್ಳೆಯ ಸಂಸ್ಕಾರ ನೀಡುವ ಬೋರ್ಡಿಂಗ ಆಗಿದೆ. ಇಲ್ಲಿ ಕಲಿಯುವ ಎಲ್ಲಾ ವಿದ್ಯಾರ್ಥಿಗಳು ಒಳ್ಳೆಯ ಸಂಸ್ಕಾರಯುಕ್ತ ವಿದ್ಯಾರ್ಥಿಗಳು ಆಗುವುದರಲ್ಲಿ ಯಾವುದೇ ಸಂಶಯವಿಲ್ಲವೆಂದು ನುಡಿದರು. ಈ ಕಾರ್ಯಕ್ರಮಕ್ಕೆ ಬ್ರಾಹ್ಮಿಳಾ ಪರಿಷತ್ತ, ಹಳೇ ವಿದ್ಯಾರ್ಥಿ ಸಂಘ, ಆಧಿನಾಥ ಮಹಿಳಾ ಸಂಘ, ಪದ್ಮಾವತಿ ಮಹಿಳಾ ಸಂಘ ಹಾಗೂ ಸಮಾಜದ ಶ್ರಾವಕ-ಶ್ರಾವಕಿಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರು. ನಂತರ ಆರ್.ಟಿ. ತವನಪ್ಪನವರ ವಂದನಾರ್ಪಣೆ ಣಮೋಕಾರ ಮಂತ್ರದೊಂದಿಗೆ ಧರ್ಮ ಸಭೆ ಮುಕ್ತಾಯಗೊಂಡಿತು.

WWW.HOMBUJAPADMAVATI.ORG

ಅಂತರಾಷ್ಟ್ರೀಯ ಯೋಗ ದಿನಾಚರಣೆ

ಮೂಡುಬಿದಿರೆ : ದಿಗಂಬರ ಜೈನ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜೂ. 21 ರ ಮಂಗಳವಾರ ಅಪರಾಹ್ನ 2.00 ಗಂಟೆಗೆ ಸರಿಯಾಗಿ ಶಾಲಾ ಅಮೃತ ಮಹೋತ್ಸವ ಕಟ್ಟಡದಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು.

ಸಭೆಯ ಅಧ್ಯಕ್ಷತೆಯನ್ನು ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಶಶಿಕಾಂತ್ ವೈ. ವಹಿಸಿ ಯೋಗ ಶಿಕ್ಷಣದ ಅವಿಭಾಜ್ಯ ಅಂಗ ವಿದ್ಯಾರ್ಥಿಗಳಾದ ನೀವು ಪಠ್ಯದ ಜೊತೆ ಅದನ್ನು ತೊಡಗಿಸಿಕೊಳ್ಳಿ ಎಂದರು. ಮುಖ್ಯ ಅತಿಥಿಗಳಾಗಿ ಶಾಲಾ ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ಪೃಥ್ವಿರಾಜ್ ಶೆಟ್ಟಿ ಕಾರ್ಯಕ್ರಮವನ್ನು ಉದ್ಘಾಟಿಸಿ "ಯೋಗ ಮನಸ್ಸಿಗೆ ಶಾಂತಿಯನ್ನು ಒದಗಿಸುತ್ತದೆ. ಆರೋಗ್ಯವನ್ನು ಸದೃಢವಾಗಿಟ್ಟುಕೊಳ್ಳಬಹುದು" ಎಂದು ತಿಳಿಸಿದರು.

ಇನ್ನೊರ್ವ ಮುಖ್ಯ ಅತಿಥಿಯಾಗಿ ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಮೂಡುಬಿದಿರೆ ಇಲ್ಲಿಯ ಸಹ ಶಿಕ್ಷಕಿ ಶ್ರೀಮತಿ ಪ್ರಫುಲ್ಲಾರವರು ಆಗಮಿಸಿ "ಯೋಗವು ಮನಸ್ಸು ಮತ್ತು ದೇಹವನ್ನು ಒಂದುಗೂಡಿಸುತ್ತದೆ. ಚಂಚಲ ಮನಸ್ಸನ್ನು ಏಕಾಗ್ರತೆಗೆ ತರಲು ಯೋಗ ಮಾಡಬೇಕು. ವಿದ್ಯಾರ್ಥಿಗಳು ಬಾಲ್ಯದಿಂದಲೇ ಯೋಗಾಭ್ಯಾಸದಲ್ಲಿ ತೊಡಗಿದರೆ ಆರೋಗ್ಯವು ಉತ್ತಮವಾಗಿರುತ್ತದೆ" ಎಂದರು.

ಶಾಲೆಯ ಯೋಗ ಶಿಕ್ಷಕಿಯಾದ ಶ್ರೀಮತಿ ಮಂಜುಳಾರವರು 5, 6 ಮತ್ತು 7 ನೇ ತರಗತಿಯ ವಿದ್ಯಾರ್ಥಿಗಳಿಗೆ ಯೋಗಬ್ಯಾಸವನ್ನು ಮಾಡಿದರು. ದೈಹಿಕ ಶಿಕ್ಷಕರಾದ ಜಗದೀಶ್ ಅಜ್ರಿಯವರು ಕಾರ್ಯಕ್ರಮವನ್ನು ನಿರೂಪಿಸಿದರು. ಕುಮಾರಿ ಅನ್ನಪೂರ್ಣ ಸ್ವಾಗತಿಸಿದರು. ಶ್ರೀಮತಿ ಜ್ಯೋತಿಯವರು ಧನ್ಯವಾದಗೈದರು.

ಮನೆ ವೈದ್ಯ: ಅತಿಸಾರಕ್ಕೆ ಸರಳ ಗೃಹವೈದ್ಯ ಚಿಕಿತ್ಸೆ

ಮೇಲಿಂದ ಮೇಲೆ ತೆಳುವಾದ ಮಲವಿಸರ್ಜನೆ ಆಗುವುದಕ್ಕೆ ಅತಿಸಾರ (Loose Motion) ಎಂದು ಹೆಸರು. ಕರುಳಿನ ದೋಷ, ಗಟ್ಟಿಯಾದ ಪದಾರ್ಥಗಳ ಸೇವನೆ, ಅರೆಬೆಂದ ಆಹಾರ ಪದಾರ್ಥಗಳ ಸೇವನೆ, ಹೆಚ್ಚು ಜಿಡುವಿನ ಪದಾರ್ಥಗಳ ಸೇವನೆ, ಕ್ರಿಮಿಯುಕ್ತ, ಕೊಳೆತು ನಾರುವ ಆಹಾರ ವಸ್ತುಗಳ ಸೇವನೆ, ಹೆಚ್ಚು ಖಾರದ ಆಹಾರ ಸೇವನೆ, ಸಮಯ ತಪ್ಪಿ ಆಹಾರದ ಸೇವನೆ ಮತ್ತು ಕೆಟ್ಟ ನೀರನ್ನು ಕುಡಿಯುವುದರಿಂದ ತೀವ್ರ ಅತಿಸಾರ ಉಂಟಾಗುತ್ತದೆ. ಚಿಕಿತ್ಸಾ ದೃಷ್ಟಿಯಿಂದ ಆಯುರ್ವೇದ ಶಾಸ್ತ್ರದಲ್ಲಿ ಅತಿಸಾರವನ್ನು ವಾತಜ, ಪಿತ್ತಜ, ಕಫಜ, ತ್ರಿದೋಷಜ, ಶೋಕಜ, ಆಮಜ ಎಂಬ ಪ್ರಭೇದಗಳಿಂದ ವಿಂಗಡಿಸಿ ಚಿಕಿತ್ಸೆ ನೀಡಲಾಗುತ್ತದೆ.

ಅತಿಸಾರದಲ್ಲಿ ಆಹಾರದ ನಿಯಮ :

ಅತಿಸಾರ ಪ್ರಾರಂಭಕ್ಕೆ ಮೊದಲು ಕೆಳಹೊಟ್ಟೆ, ಹೊಕ್ಕಳು ಮತ್ತು ಗುದದ್ವಾರದಲ್ಲಿ ಅತಿಯಾದ ನೋವುಂಟಾಗಿ ಅತ್ಯಲ್ಪ ಕಾಲದಲ್ಲಿ ಮೇಲೆ ಮೇಲೆ ತೆಳುವಾದ ಮಲವಿಸರ್ಜನೆಯಾಗಿ ರೋಗಿಯು ಬೇಗನೇ ಅಶಕ್ತನಾಗುತ್ತಾನೆ. ಆಯುರ್ವೇದ ಶಾಸ್ತ್ರದಲ್ಲಿ ಪ್ರಥಮವಾಗಿ ಈ ದೋಷಕ್ಕೆ ಲಂಘನವೇ (ಉಪವಾಸ) ಪ್ರಥಮ ಪ್ರತಿಬಂಧಕ ಎಂದು ತಿಳಿಸಿರುತ್ತಾರೆ.

ಆಹಾರದಲ್ಲಿ ಅಕ್ಕಿ ಹುರಿದ ಗಂಜಿ, ಸಿಹಿ ಮಜ್ಜಿಗೆ, ಅರಳು ಬೇಯಿಸಿ ಗಂಜಿ, ಉಪ್ಪು-ಸಕ್ಕರೆ ನೀರು (1 ಲೋಟ ಕಾದಾರಿದ ನೀರಿಗೆ 2 ಚಮಚ ಸಕ್ಕರೆ, 1 ಕಲ್ಲು ಉಪ್ಪು ಹಾಕಿ ಕದಡಿಸಿದಂತ ನೀರು), ಮೆಂತೆ ಗಂಜಿ, ಆರಾರೋಟು ಹಿಟ್ಟು ಹಾಲಿನಲ್ಲಿ ಕಲಸಿ ಕುದಿಸಿ ಸೇವಿಸುವುದು ಹಿತಕರವಾಗುತ್ತದೆ.

ಅತಿಸಾರಕ್ಕೆ ಸರಳ ಔಷಧಗಳು :

1) 1 ಗ್ರಾಂ ಓಮದ ಪುಡಿ, 1 ಗ್ರಾಂ ಮೆಂತೆಪುಡಿ, 1 ಗ್ರಾಂ ಸೈದವ ಲವಣ ಬೆರೆಸಿ ಪ್ರತೀ 6 ಗಂಟೆಗೊಂದು ಸಲ ಮಜ್ಜಿಗೆಯಲ್ಲಿ 3 ದಿವಸ ಸೇವಿಸಿದರೆ ಉತ್ತಮ ಪರಿಹಾರ ಸಿಗುತ್ತದೆ.
2) ಮೆಂತೆ ಪುಡಿ 1 ಟೀ ಚಮಚ, 1 ಅಕ್ಕಿಕಾಳಿನ ಪ್ರಮಾಣ ಇಂಗು ಸೇರಿಸಿ ದಿನಾ 3 ಸಲ 3 ದಿನ ಸೇವಿಸುವುದರಿಂದ ಅಜೀರ್ಣದಿಂದ ಬಂದಿರುವ ಅತಿಸಾರ ಗುಣವಾಗುತ್ತದೆ.
3) ಜೀರಿಗೆ ಪುಡಿ 1 ಗ್ರಾಂ, ಸೈದವ ಲವಣ 1 ಗ್ರಾಂ ಬೆರೆಸಿ ಕುಡಿಯುವುದರಿಂದ ಹೊಟ್ಟೆ ನೋವು ಬಂದು ಆಗುತ್ತಿರುವ ಅತಿಸಾರ ಶೀಘ್ರವಾಗಿ ಗುಣ ಹೊಂದುತ್ತದೆ.
4) ತುಳಸಿ ಎಲೆ 1 ಹಿಡಿಯಷ್ಟು ತಂದು ತೊಳೆದು ಅದನ್ನು 1 ಲೋಟ ನೀರಿನಲ್ಲಿ ಕುದಿಸಿ 3/4 ಲೋಟಕ್ಕೆ (ಮುಕ್ಕಾಲು) ಇಂಗಿಸಿ ನಂತರ ಸೋಸಿ 1/2 ಗ್ರಾಂ ಜಾಯಿಕಾಯಿ ಪುಡಿಮಾಡಿ ಅದಕ್ಕೆ ಸೇರಿಸಿ ದಿನಾ 2-3 ಸಲ ಕುಡಿಯುವುದು. ಇದರಿಂದ ಜ್ವರದಿಂದ ಕೂಡಿದ ಅತಿಸಾರ ಬೇಗನೆ ಗುಣಹೊಂದುತ್ತದೆ.
5) ಶುಂಠಿ ಚೂರ್ಣ 1 ಚಮಚ, ಸೈಂದವ ಲವಣ ಚೂರ್ಣ 1/2 ಚಮಚ ಇವೆರಡನ್ನು ಸೇರಿಸಿ ದಿನಾ 3 ಸಲ ಮಜ್ಜಿಗೆಯಲ್ಲಿ ಸೇವಿಸುವುದರಿಂದ, ವಿಷಮ ಆಹಾರ ಸೇವನೆ (Food Poisoning) ನಿಂದ ಉಂಟಾದ ಅತಿಸಾರ ಬೇಗನೆ ಗುಣಹೊಂದುತ್ತದೆ.
6) 1 ಲೋಟ ದಾಳಿಂಬೆ ರಸಕ್ಕೆ 1/2 ಚಮಚ ಜೀರಿಗೆ, 1/2 ಚಮಚ ಓಮದಪುಡಿ ಸೇರಿಸಿ ಪ್ರತಿ ಗಂಟೆಗೆ 1 ಸಲ ಕುಡಿಯುತ್ತಾ ಬರುವುದರಿಂದ ಅಜೀರ್ಣ ಭೇದಿ ಗುಣಹೊಂದುತ್ತದೆ.
7) ತುಪ್ಪದಲ್ಲಿ ಹುರಿದ ಮೆಂತೆ ಹಿಟ್ಟನ್ನು ಪ್ರತೀ ಹೊತ್ತಿಗೆ 1 ಚಮಚದಷ್ಟು ದಿನಾ 3 ಸಲ ಕಲ್ಲುಸಕ್ಕರೆ ನೀರಿನಲ್ಲಿ ಬೆರೆಸಿ ಸೇವಿಸುತ್ತಾ ಬಂದರೆ ಆಹಾರ ವಿಷಮದಿಂದ ಬಂದಿರುವ ಅತಿಸಾರ ಗುಣ ಹೊಂದುತ್ತದೆ.
8) ಅಕ್ಕಿಯನ್ನು ಹುರಿದು, ರವೆ ಮಾಡಿ, ಮೊಸರಿನಲ್ಲಿ ನೆನೆಸಿ, 4 ಹನಿ ನಿಂಬೆರಸ ಸೇರಿಸಿ ದಿನಾ 3 ಸಲ ಸೇವಿಸುವುದರಿಂದ ಅತಿಸಾರ ಗುಣ ಹೊಂದುತ್ತದೆ.
9) 1 ಲೋಟ ಹಾಲಿಗೆ 2 ಹನಿ ನಿಂಬೆರಸ ಹಾಕಿ, ಹಾಲು ಒಡೆದ ನಂತರ ಸೋಸಿ, 1 ಚಮಚ ಜೀರಿಗೆಪುಡಿ, 1 ಚಮಚ ಕಲ್ಲುಸಕ್ಕರೆಪುಡಿ, 1 ಕಾಳಿನಷ್ಟು ಇಂಗು ಸೇರಿಸಿ ದಿನಾ 3 ಸಲ ಕುಡಿಯುವುದರಿಂದ ಭೇದಿ ಶೀಘ್ರ ಗುಣ ಹೊಂದುತ್ತದೆ.
10) ಬಡೆಸೋಪು ಪುಡಿ 1/2 ಚಮಚ, ಜಾಯಿಕಾಯಿ ಪುಡಿ 1/4 ಚಮಚ, ಸೈಂದನ ಲವಣ ಪುಡಿ 1/4 ಚಮಚ ಸೇರಿಸಿ ದಿನಾ 3 ಸಲ ಸೇವಿಸುವುದರಿಂದ ಅತಿಸಾರವು ಶೀಘ್ರ ಶಮನವಾಗುತ್ತದೆ.

ಮೇಲೆ ಹೇಳಿದ ಚೂರ್ಣ ತಯಾರು ಮಾಡಿಕೊಂಡು 1 ವರ್ಷದ ಒಳಗಿನ ಮಕ್ಕಳಿಗೆ ಕಲ್ಲುಸಕ್ಕರೆ ಬೆರೆಸಿದ ನೀರಿನೊಂದಿಗೆ 1/4 ಚಮಚ ಪುಡಿ ಹಾಕಿ ಕಲಸಿ ದಿನಾ 3 ಸಲ ಕೊಡುವುದರಿಂದ ಭೇದಿಯು ಶೀಘ್ರ ಗುಣಹೊಂದುವುದು. 1 ವರ್ಷದಿಂದ 3 ವರ್ಷದ ಒಳಗಿನ ಮಕ್ಕಳಿಗೆ 1/2 ಚಮಚ ಪುಡಿ ಹಾಗೂ 3 ವರ್ಷದಿಂದ 5 ವರ್ಷ ತನಕದ ಮಕ್ಕಳಿಗೆ 3/4 ಚಮಚ ಪುಡಿ ದಿನಾ 3 ಸಲ ಕಲ್ಲುಸಕ್ಕರೆ ನೀರಿನಲ್ಲಿ ಬೆರೆಸಿ ಕೊಡಲು ಭೇದಿಗೆ ಪರಿಣಾಮಕಾರಿ ಚಿಕಿತ್ಸೆಯಾಗುತ್ತದೆ.

ಡಾ॥ ಜೀವಂಧರ ಜೈನ್
ಶ್ರೀ ಪೂಜ್ಯಪಾದ ಚಿಕಿತ್ಸಾಲಯ,
ತೀರ್ಥಹಳ್ಳಿ.

ಶ್ರುತ ಪಂಚಮಿ ಆಚರಣೆ

ಆದಲಗೆರೆ : ಇಲ್ಲಿಯ ಆಚಾರ್ಯ ಶ್ರೀ 108 ವಿದ್ಯಾಸಾಗರ ಮುನಿಮಹಾರಾಜರ ಪರಮ ಪ್ರಭಾವಕ ಶಿಷ್ಯರಾದ ಮುನಿಶ್ರೀ 108 ಪಾಯಸಾಗರ ಮುನಿಮಹಾರಾಜರ ದಿವ್ಯ ಪ್ರೇರಣೆ ಮತ್ತು ಆಶೀರ್ವಾದದಿಂದ ನಿರ್ಮಿತವಾದ ಭ॥ ಶ್ರೀ ಶಾಂತಿನಾಥ ಸ್ವಾಮಿ ಗೃಹ ಚೈತ್ಯಾಲಯದಲ್ಲಿ ಪ್ರತಿ ವರ್ಷವೂ ಮಹಾವೀರ ಜಯಂತಿ, ಉಪಾಕರ್ಮ, ಗೌರಿನೊಂಪಿ, ದೀಪಾವಳಿ ಮುಂತಾದ ಅನೇಕ ಪರ್ವಗಳನ್ನು ಆಚರಿಸುತ್ತಾ ಬಂದಿದ್ದು ಮೇ. 9 ರ ಗುರುವಾರದಂದು ಶ್ರುತಪಂಚಮಿ ಆರಾಧನೆಯನ್ನು ಆಚರಿಸಲಾಯಿತು.

ಅಂದು ಬೆಳಿಗ್ಗೆ ನಿತ್ಯವಿಧಿ, ಶಾಂತಿನಾಥ ಸ್ವಾಮಿಗೆ ಅಭಿಷೇಕ, ನಂತರ ಶ್ರುತಾವತಾರವಾದ ಕಥೆಯನ್ನು ಸವಿಸ್ತಾರವಾಗಿ ಪುರೋಹಿತರಾದ ಧರಣೇಂದ್ರ ಕುಮಾರ್‌ರವರು ವಿವರಿಸಿದರು. ನಂತರ ಮಹಾಮಂಗಳಾರತಿಯೊಂದಿಗೆ ಆರಾಧನೆಗಳು ಸಂಪನ್ನಗೊಂಡವು. ಈ ಎಲ್ಲಾ ಪೂಜಾ ಕಾರ್ಯಕ್ರಮಗಳಿಗೆ ಆದಲಗೆರೆಯ ಶ್ರಾವಕ-ಶ್ರಾವಕಿಯರು ಪಾಲ್ಗೊಂಡಿದ್ದರು.

ಬೆಂಗಳೂರು : ಇಲ್ಲಿಯ ಚಿಕ್ಕಪೇಟೆಯಲ್ಲಿರುವ ಶ್ರೀ ಸಿದ್ಧಾಯಿನಿ ಜೈನ ಮಹಿಳಾ ಸಮಾಜವು ಶ್ರೀ ದಿಗಂಬರ ಜೈನ ಮಹಾವೀರ ಸಂಘದ ಸಹಯೋಗದೊಂದಿಗೆ ಶ್ರುತ ಪಂಚಮಿಯನ್ನು ಆಚರಿಸಲಾಯಿತು. ಮಂದಿರದಲ್ಲಿ ವಿಶೇಷ ಪೂಜೆ, ಶ್ರುತಸ್ಕಂದ ಆರಾಧನೆ ಹಾಗೂ ಬೆಳ್ಳಿ ಪಲ್ಲಕ್ಕಿ, ಧವಳ ಗ್ರಂಥಗಳ ಮೆರವಣಿಗೆ ಮಂತ್ರ ಘೋಷಗಳೊಂದಿಗೆ ನೆರವೇರಿತು.

ನಂತರ ನಡೆದ ಧಾರ್ಮಿಕ ಸಭೆಯಲ್ಲಿ ನವೀನ್ ಪ್ರಸಾದ್‌ರವರು ಉಪನ್ಯಾಸ ನೀಡಿದರು. ಸಭೆಯ ಅಧ್ಯಕ್ಷತೆಯನ್ನು ಮಹಾವೀರ ಸಂಘದ ಅಧ್ಯಕ್ಷರಾದ ಟಿ.ಜಿ. ದೊಡ್ಡಮನಿಯವರು ವಹಿಸಿದ್ದರು. ಇದೇ ಸುಸಂದರ್ಭದಲ್ಲಿ ಚಕ್ರೇಶ್ವರಿ ಮಹಿಳಾ ಸಮಾಜದ ಅಧ್ಯಕ್ಷರಾದ ಶ್ರೀಮತಿ ನಿರ್ಮಲಮ್ಮ, ಡಾ॥ ನಿಶಾ ಜೈನ್‌ರವರ ಅನುಪಸ್ಥಿತಿಯಲ್ಲಿ ತಾಯಿಯವರಾದ ಶ್ರೀಮತಿ ಸುಧಾರವರು, ಶ್ರೀ ಸಿ. ನಾಗಣ್ಣ, ಶ್ರೀ ಶಂಕರ್‌ರವರನ್ನು ಶ್ರೀ ಸಿದ್ಧಾಯಿನಿ ಜೈನ ಮಹಿಳಾ ಸಮಾಜದ ವತಿಯಿಂದ ಸನ್ಮಾನಿಸಲಾಯಿತು.

ಸ್ವಾಗತವನ್ನು ಶ್ರೀಮತಿ ಸುಧಾ ಮಹಾವೀರರವರು ಮಾಡಿದರು. ಪ್ರಾರ್ಥನೆಯನ್ನು ಶ್ರೀಮತಿ ಧರ್ಮಶ್ರೀಯವರು ಮಾಡಿದರು. ಸನ್ಮಾನಿಸಲಾದ ವ್ಯಕ್ತಿಗಳನ್ನು ಮತ್ತು ಪ್ರವಚನಕಾರರ ಪರಿಚಯವನ್ನು ಐ.ವಿ. ಪದ್ಮಿನಿಯವರು, ವಂದನಾರ್ಪಣೆಯನ್ನು ಶ್ರೀಮತಿ ಪದ್ಮಿನಿ ನಾಗರಾಜರವರು ನಡೆಸಿಕೊಟ್ಟರು. ಕಾರ್ಯಕ್ರಮವನ್ನು ಶ್ರೀಮತಿ ಪ್ರತಿಭಾ ಅಣಿಕಾರ್‌ರವರು ನಿರೂಪಿಸಿದರು.

ಪ್ರತಿಭಾ ಪುರಸ್ಕಾರ

ಹುಬ್ಬಳ್ಳಿ : ಇಲ್ಲಿಯ ಶಾಂತಿನಾಥ ಮಹಿಳಾ ಸಮಾಜದ ವತಿಯಿಂದ ಜೈನ ಸಮಾಜದ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ. ಯಲ್ಲಿ ಶೇ. 85% ಕ್ಕಿಂತ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ ವಿದ್ಯಾನಿಕೇತನ ಕಾಲೇಜಿನ ಸಂಸ್ಥಾಪಕರಾದ ಪ್ರೋ. ಅನಿಲ ಚೌಗಲಾರವರು ಜೀವನದಲ್ಲಿ ಯಾವುದೂ ಅಸಾಧ್ಯವೆಂಬುದಿಲ್ಲ. ಅತಿ ಪರಿಶ್ರಮ, ಪ್ರಯತ್ನ, ದೃಢಸಂಕಲ್ಪ, ಛಲ ಇದ್ದರೆ ನಾವು ನಮ್ಮ ಗುರಿ ತಲುಪಲು ಸಾಧ್ಯವಾಗುವುದೆಂದು ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಿದರು. ಸಭೆಯ ಅಧ್ಯಕ್ಷತೆಯನ್ನು ಶ್ರೀಮತಿ ಸರೋಜ ಗುಗ್ಗರಿ ವಹಿಸಿದ್ದರು. ಶಾಂತಿನಾಥ ಮಹಿಳಾ ಸಮಾಜದ ಪದಾಧಿಕಾರಿಗಳು ಹಾಗೂ ಸದಸ್ಯರು ಹಾಜರಿದ್ದರು.

ಹುಬ್ಬಳ್ಳಿ : ಇಲ್ಲಿಯ ಪದ್ಮಾವತಿ ಮಹಿಳಾ ಮಂಡಲದಿಂದ ಶ್ರುತಪಂಚಮಿಯ ಅಂಗವಾಗಿ ಹಳೇ ಹುಬ್ಬಳ್ಳಿಯ ಪಾರ್ಶ್ವನಾಥ ದಿಗಂಬರ ಜೈನ ಮಂದಿರದಲ್ಲಿ ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ಯಲ್ಲಿ ಶೇ. 85% ಕ್ಕಿಂತ ಹೆಚ್ಚು ಅಂಕಗಳಿಸಿದ ಪ್ರತಿಭಾ ಮಕ್ಕಳನ್ನು ಸನ್ಮಾನಿಸಲಾಯಿತು. ಎಸ್.ಎಸ್.ಎಲ್.ಸಿ. ಯಲ್ಲಿ ರಾಜ್ಯಕ್ಕೆ 6ನೇ ರ್‍ಯಾಂಕ್ ಹಾಗೂ ಧಾರವಾಡ ಜಿಲ್ಲೆಗೆ 2 ನೇ ರ್‍ಯಾಂಕ್ ಪಡೆದ ಕು. ಭವ್ಯಶ್ರೀ ಪಾಟೀಲ್, ಪದ್ಮಶ್ರೀ ರಾಜಮಾನೆ, ಸಂಕೇತ ಉಪಾಧ್ಯೆ, ಸಮೃದ್ಧಿ ಬೋಗಾರ ಮತ್ತು ಪಿ.ಯು.ಸಿ.-ಸಿ.ಇ.ಟಿ. ಯಲ್ಲಿ 712ನೇ ರ್‍ಯಾಂಕ್ ಗಳಿಸಿದ ಧನಂಜಯ ಮುತ್ತಗಿ, ಅರ್ಹನ್ ತಾಳಿಕೋಟಿ, ಕುಸುಮಾ ಸೂಜಿ, ಪ್ರಿಯಾಂಕ ಕುರುಕುರೆ ಹಾಗೆಯೇ ಬಿ.ಇ. ಯಲ್ಲಿ ಅಧಿಕ ಅಂಕ ಗಳಿಸಿದ ಸ್ನೇಹ ರಾಜಮಾನೆ ಸೇರಿದಂತೆ ಅನೇಕ ಜೈನ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ 1 ರಿಂದ 10ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಉಚಿತವಾಗಿ ನೋಟ್‌ಬುಕ್ ಹಾಗೂ ಪೆನ್‌ಗಳನ್ನು ವಿತರಿಸಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಹಿಳಾ ಮಂಡಳದ ಅಧ್ಯಕ್ಷೆ ಸುಧಾ ಶಿರಗುಪ್ಪಿ ವಹಿಸಿದರು. ಸಾನ್ವಿ ನವಲೂರು ಪ್ರಾರ್ಥಿಸಿ, ಅರುಣಾ ಶಿರಗುಪ್ಪಿ ನಿರೂಪಿಸಿ, ಭಾರತಿ ರಾಜಮಾನೆ ವಂದಿಸಿದರು.

ಹುಬ್ಬಳ್ಳಿ : ಇಲ್ಲಿಯ ಬ್ರಾಹ್ಮಿಳಾ ಜೈನ ಮಹಿಳಾ ಪರಿಷತ್‌ನ ವತಿಯಿಂದ ಜೂ. 11, 2016 ರಂದು ನಡೆದ ಕಾರ್ಯಕಾರಿ ಸಭೆಯಲ್ಲಿ ಶೇ. 90% ಅಂಕ ಪಡೆದು ಪಾಸಾದ ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಪುರಸ್ಕಾರ ವಿತರಿಸಲಾಯಿತು. ಈ ಪುರಸ್ಕಾರ ಸಮಾರಂಭದಲ್ಲಿ ಶ್ರೀಮತಿ ಪಂಕಜಾ ಮ. ಸೂಜಿ, ಅಧ್ಯಕ್ಷರು, ಶ್ರೀಮತಿ ಮ. ಕೊಡಚಚಾಡ, ಉಪಾಧ್ಯಕ್ಷರು, ಶ್ರೀಮತಿ ಸುರೇಖಾ ತ. ಶಿರಗುಪ್ಪಿ, ಗೌ. ಕಾರ್ಯದರ್ಶಿಗಳು ಹಾಗೂ ವಿನುತಾ ಕು. ಪಟ್ಟಣಶೆಟ್ಟಿ, ಸಹಕಾರ್ಯದರ್ಶಿ, ಶ್ರೀಮತಿ ಜ್ಯೋತಿ ಉ. ದೊಡ್ಡಮನಿ, ಖಜಾಂಚಿ, ಶ್ರೀಮತಿ ಸುಭದ್ರಾ ವೃ. ಮುತ್ತಿನ ಹಾಗೂ ಶ್ರೀಮತಿ ಪ್ರೇಮ ರೋಖಡೆ ಮುಂತಾದವರು ಉಪಸ್ಥಿತರಿದ್ದರು.

ವಾರ್ಷಿಕ ಪಾಲಕಿ ಉತ್ಸವ

ಮೋರಗೇರಿ : ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಅತಿಶಯ ಕ್ಷೇತ್ರವಾದ ಮೋರಗೇರಿ ಶ್ರೀ ಬ್ರಹ್ಮದೇವರ ದೇವಸ್ಥಾನ ಅತಿ ಪುರಾತನವಾದದ್ದು, ಕ್ರಿ.ಶ. 10ನೇ ಶತಮಾನಕ್ಕಿಂತಲೂ ಹಿಂದಿನದು. ಇಂತಹ ಸ್ಥಳದಲ್ಲಿರುವ ಶ್ರೀ ಬ್ರಹ್ಮದೇವರ ಪಾಲಕಿ ಉತ್ಸವವು ಆ. 28, 2016ರ ಭಾನುವಾರದಂದು ಜರುಗಲಿದೆ. ಅಂದು ಬೆಳಿಗ್ಗೆ ಆಗಮೋಕ್ತವಾಗಿ ಪಂಚಾಮೃತ ಅಭಿಷೇಕ ಜರುಗಲಿದೆ. ನಂತರ ಬಂಗಾರದ ಮೂರ್ತಿಯನ್ನಿಟ್ಟು ಅಲಂಕರಿಸಲಾಗುವುದು.

ಅತಿಶಯ ಶ್ರೀಕ್ಷೇತ್ರ ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರ ಆದೇಶದಂತೆ ಶ್ರೀ ಬ್ರಹ್ಮದೇವರ ದೇವಸ್ಥಾನದ ಮೇಲೆ 23 ಅಡಿ ಎತರದ ಗೋಪುರದ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ದೇವಾಲಯದ ಗೋಪುರ ನಿರ್ಮಾಣಕ್ಕೆ ಹಾಗೂ ಇತರೆ ಕಾರ್ಯಗಳಿಗೆ ಭಕ್ತಾದಿಗಳು ವಾಗ್ದಾನ ಮಾಡಿರುವವರು ಮತ್ತು ಕೊಡುಗೈದಾನಿಗಳು ಈ ಶುಭ ಕಾರ್ಯಕ್ಕೆ ಉದಾರವಾಗಿ ದಾನ ಮಾಡಬೇಕೆಂದು ಕೋರಲಾಗಿದೆ. ಹಣವನ್ನು, ಡಿ.ಡಿ.ಯನ್ನು ಮತ್ತು ಚೆಕ್‌ನ್ನು ಶ್ರೀ ಜಿನದತ್ತಪ್ಪ, ನಿರ್ವಾಹಕ ಟ್ರಸ್ಟಿ, ಮೊರಗೇರಿ ಶ್ರೀ ಬ್ರಹ್ಮದೇವರ ದೇವಸ್ಥಾನ ಟ್ರಸ್ಟ್ (ರಿ.), "ಜಿನಪದ್ಮ", ಕೋರ್ಟ್ ಹತ್ತಿರ, ಹರಪನಗಳ್ಳಿ-583131, ದಾವಣಗೆರೆ ಜಿಲ್ಲೆ ಈ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿಸಿದ್ದಾರೆ. ದೂರವಾಣಿ ಸಂಖ್ಯೆ-08398-280512, ಚೆಕ್‌ನ್ನು/ ಡಿ.ಡಿ. ಯನ್ನು "ಮೊರಗೇರಿ ಶ್ರೀ ಬ್ರಹ್ಮದೇವರ ದೇವಸ್ಥಾನ ಟ್ರಸ್ಟ್ (ರಿ.)" ಈ ಹೆಸರಿನಲ್ಲಿ ಕಳುಹಿಸಬಹುದು. ಅಂದಿನ ಅನ್ನ ಸಂತರ್ಪಣೆಯನ್ನು ಮೇಡ್ಲೇರಿ ಶ್ರೀಮತಿ ಪದ್ಮಾವತಿ, ಬಾಹುಬಲಿ ಮೆಡಿಕಲ್ಸ್, ಹೂವಿನಹಡಗಲಿ ಇವರು ನೆರವೇರಿಸಿ ಕೊಡಲಿದ್ದಾರೆ. ಹರಪನಹಳ್ಳಿ ಯಿಂದ ಮೋರಗೇರಿಗೆ ಹೋಗಿ ಬರುವ ವಾಹನದ ವ್ಯವಸ್ಥೆಯನ್ನು ಎಂದಿನಂತೆ ಶ್ರೀಮತಿ ಜೆ. ಪದ್ಮಾವತಿ ಜಿನದತ್ತಪ್ಪ, ವನಜಾಕ್ಷಿ ಹೆಚ್. ಸಣ್ಣಪ್ಪ ಮತ್ತು ಎಂ. ಜಯಶ್ರೀ ಪದ್ಮನಾಭ ಇವರುಗಳು ಏರ್ಪಡಿಸಲಿದ್ದಾರೆ.

ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸಿ ಶ್ರೀ 1008 ಶೀತಲನಾಥ ತೀರ್ಥಂಕರ, ಶ್ರೀ ಬ್ರಹ್ಮದೇವರು ಮತ್ತು ಮಾನವಿ ಯಕ್ಷಿ ದೇವರ ಕೃಪೆಗೆ ಪಾತ್ರರಾಗಬೇಕೆಂದು ಆಡಳಿತ ಮಂಡಳಿ ತಿಳಿಸಿದೆ.

WWW.HOMBUJAPADMAVATI.ORG

ಪುರಪ್ರವೇಶ ಹಾಗೂ ಕಾರ್ಯಗಾರ

ನವಲಗುಂದ : ಇಲ್ಲಿಯ ಭ॥ ಶ್ರೀ ಆದಿನಾಥ ದಿಗಂಬರ ಜೈನ ಸಮಾಜ ಸೇವಾ ಸಂಘದ ವತಿಯಿಂದ ಸೋಂದಾ ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಭಟ್ಟಾಕಲಂಕ ಭಟ್ಟಾರಕ ಮಹಾಸ್ವಾಮಿಗಳವರ ಪುರ ಪ್ರವೇಶವು ಪೂರ್ಣಕುಂಭದೊಂದಿಗೆ ಜೂನ್ 15 ರಂದು ವಿಜೃಂಭಣೆಯಿಂದ ನೆರವೇರಿತು.

ಅಂದು ಜೈನ ಅಲ್ಪಸಂಖ್ಯಾತರಿಗೆ ಕರ್ನಾಟಕ ಸರ್ಕಾರದಿಂದ ಸಿಗುವ ಸೌಲಭ್ಯ ಕುರಿತು ಒಂದು ದಿನದ ಕಾರ್ಯಾಗಾರ ಹಾಗೂ ಧಾರ್ಮಿಕ ಸಭೆಯನ್ನು ಪೂಜ್ಯಶ್ರೀಗಳವರ ಪಾವನ ಸಾನಿಧ್ಯದಲ್ಲಿ ನಡೆಸಲಾಯಿತು.

ಪೂಜ್ಯಶ್ರೀಗಳವರು ಸರಕಾರದಿಂದ ಸಿಗುವ ಸೌಲಭ್ಯಗಳ ಬಗ್ಗೆ ಸಮಾಜದ ಜನರಿಗೆ ಸಾಕಷ್ಟು ಅರಿವಿಲ್ಲದಿರುವುದರಿಂದ ಅಲ್ಪಸಂಖ್ಯಾತ ಸಮಾಜದವರು ವಂಚಿತರಾಗುತ್ತಿರುವುದು ದುರದೃಷ್ಟಕರ ಸಂಗತಿ. ಕಾರಣ ಸಮಾಜದವರು ಸಂಘಟಿತರಾಗಿ ಎಲ್ಲರಿಗೂ ಮಾಹಿತಿ ನೀಡಿ ಸರಕಾರದ ಹಲವಾರು ಯೋಜನೆಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ಸಮಾಜ ಬಾಂಧವರಿಗೆ ಸಲಹೆ ನೀಡಿದರು.

ವಿಶೇಷ ಉಪನ್ಯಾಸಕರಾಗಿ ಬೆಂಗಳೂರಿನ ಕರ್ನಾಟಕ ಜೈನ್ ಅಸೋಸಿಯೇಷನ್‌ನ ಗೌರವ ಕಾರ್ಯದರ್ಶಿಗಳಾದ ಶ್ರೀ ಜಿ.ಟಿ. ದೊಡ್ಡಮನಿರವರು ಮಾತನಾಡಿ ಅಲ್ಪಸಂಖ್ಯಾತರಿಗೆ ಸರಕಾರದಿಂದ ಅನೇಕ ಸೌಲಭ್ಯಗಳು ಇದ್ದು ಶಿಕ್ಷಣ ವಾಣಿಜ್ಯ ಕೃಷಿ ಇವುಗಳಿಗೆ ಅತಿ ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯಗಳಿದ್ದು ಹೀಗೆ ಅನೇಕ ಸೌಲಭ್ಯಗಳಿರುವ ಬಗ್ಗೆ ಸರಕಾರದ ಸುತ್ತೋಲೆ ಹಾಗೂ ಇನ್ನಿತರ ವಿವರಗಳ ದಾಖಲಾತಿಗಳನ್ನು ಸಮಾಜಕ್ಕೆ ನೀಡಿ ಅರಿವು ಮೂಡಿಸಿದರು.

ನವಲಗುಂದ ಜೈನ ಸಮಾಜದ ಅಧ್ಯಕ್ಷರಾದ ವಿದ್ಯಾಧರ ಪಿ. ಪಾಟೀಲರವರು ಕಾರ್ಯಾಗಾರದ ಅಧ್ಯಕ್ಷತೆಯನ್ನು ವಹಿಸಿದ್ದರು. ಅತಿಥಿಗಳಾಗಿ ಸಮಾಜದ ಹಿರಿಯರಾದ ಪಿ.ಎಸ್. ಧರಣೆಪ್ಪನವರ ಶಾಂತಪ್ಪ ಜೈನರ, ಬಿ.ಆರ್. ಪುಟ್ಟಣ್ಣವರ, ಮೋಹನ ನಾವಳ್ಳಿ, ಮಂಜುನಾಥ ಕಬ್ಬಿನ ಇನ್ನಿತರರು ಆಗಮಿಸಿದ್ದರು. ಸುತ್ತಮುತ್ತಲಿನ ಗ್ರಾಮದ ಹಾಗೂ ನವಲಗುಂದ-ನರಗುಂದ ನಗರದ ಜೈನ ಸಮಾಜದ ಬಾಂಧವರು ಉಪಸ್ಥಿತರಿದ್ದರು. ಗಿರೀಶ ಪಾಟೀಲ ಸ್ವಾಗತಿಸಿದರು. ನಮಿತ ಎಮ್. ಪಾಟೀಲ ವಂದಿಸಿದರು.

ಜೈನ ವಧು-ವರ ಸಮಾವೇಶ

ಬೆಳಗಾಂ : ಇಲ್ಲಿಯ ಭಾರತ ಜೈನ ಸಭೆಯ ಶಾಖೆಯಾದ ಮಾಣಿಕಬಾಗ ದಿಗಂಬರ ಜೈನ ಬೋರ್ಡಿಂಗ್‌ನ ವತಿಯಿಂದ ಜೈನ ವಧು-ವರ ಸಮಾವೇಶವನ್ನು ಸೆ. 25, 2016 ರಂದು ನಗರದ ಧರ್ಮನಾಥ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಆಸಕ್ತ ವಧು-ವರರು ಸೆ. 10, 2016 ರ ಒಳಗೆ ಬಯೋಡಾಟಾ, ಐಡಿ ಸೈಜ 2 ಕಲರ್ ಫೋಟೋ ಜೊತೆಗೆ 400/- ರೂ. ಫೀಸ್ ನೊಂದಿಗೆ ಹೆಸರು ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಮಾಣಿಕಬಾಗ್ ದಿಗಂಬರ ಜೈನ ಬೋರ್ಡಿಂಗ್, ಹಳೇ ಪಿ.ಬಿ. ರಸ್ತೆ, ಬೆಳಗಾವಿ-16. ದೂ: 0831-2487373, ಮೋ: 9611715656, 8904347435, E-mail :mdjbbelgaum@gmail.com

WWW.HOMBUJAPADMAVATI.ORG

|| ಶ್ರೀ ಪಾರ್ಶ್ವನಾಥಾಯ ನಮಃ || 卐 || ಶ್ರೀ ಪದ್ಮಾಂಬಾಯೈ ನಮಃ ||

ಶ್ರೀ ಹೊಂಬುಜ ಅತಿಶಯ ಮಹಾಕ್ಷೇತ್ರದಲ್ಲಿ

ಶ್ರಾವಣ ಮಾಸದ ಸಂಪತ್ ಶುಕ್ರವಾರ ಪೂಜಾ ಮಹೋತ್ಸವಗಳು

ಆತ್ಮೀಯ ಧರ್ಮಬಂಧುಗಳೇ,

ದಿ. 05-08-2016, 12-08-2016, 19-08-2016 ಹಾಗೂ 26-08-2016ನೇ ಶುಭ ಶುಕ್ರವಾರಗಳಂದು ನೆರವೇರಲಿವೆ. ಈ ಪಾವನ ದಿನಗಳಲ್ಲಿ ಅತಿಶಯ ಮಹಾಕ್ಷೇತ್ರದಲ್ಲಿ

ಭಗವಾನ್ ಶ್ರೀ ೧೦೦೮ ಪಾರ್ಶ್ವನಾಥ ಸ್ವಾಮಿ ಮತ್ತು ಜಗನ್ಮಾತೆ ಶ್ರೀ ಪದ್ಮಾವತೀ ಅಮ್ಮನವರ ಮಹಾಸನ್ನಿಧಿಯಲ್ಲಿ

ಪರಮಪೂಜ್ಯ ಜಗದ್ಗುರು

ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರ

ದಿವ್ಯ ಸಾನಿಧ್ಯ, ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ

ವಿಶೇಷ ಪೂಜೆ, ದಾನ ಧರ್ಮಾದಿ ಕಾರ್ಯಗಳು ನೆರವೇರಲಿವೆ. ಭಕ್ತಾದಿಗಳೆಲ್ಲರೂ ಈ ಪೂಜಾ ಮಹೋತ್ಸವಗಳಲ್ಲಿ ಭಾಗವಹಿಸಿ, ಭಗವಾನ್ ಶ್ರೀ ಪಾರ್ಶ್ವನಾಥಸ್ವಾಮಿಯ ಅನನ್ಯ ಕೃಪೆಗೂ, ಮಹಾಮಾತೆ ಶ್ರೀ ಪದ್ಮಾವತೀ ಅಮ್ಮನವರ ದಿವ್ಯಾನುಗ್ರಹಕ್ಕೂ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

ವಿ.ಸೂ. : ದಕ್ಷಿಣ ಕನ್ನಡ ಜಿಲ್ಲೆಯವರಿಗಾಗಿ ಸೋಣ ಶುಕ್ರವಾರದ ಪೂಜೆಗಳು ದಿ. 19-08-2016, 26-08-2016, 02-09-2016, 09-09-2016 ಹಾಗೂ 16-09-2016 ರಂದು ನೆರವೇರಲಿವೆ

ಸೂಚನೆ : 8 ಗಂಟೆಗೆ ಮಹಾಭಿಷೇಕ, 10-30 ಗಂಟೆಗೆ ಮಹಾ ಮಂಗಳಾರತಿ ನೆರವೇರುವುದು. ಭಕ್ತಾದಿಗಳು ಶ್ರಾವಣ ಮಾಸದ ವಿಶೇಷ ಪೂಜೆ ಕಾಣಿಕೆಗಳನ್ನು ಮತ್ತು ಚತುರ್ವಿಧ ದಾನ ಧರ್ಮಾದಿ ವಿನಿಯೋಗಗಳಿಗಾಗಿ ಉದಾರ ಧನ ಸಹಾಯವನ್ನು "SHRI HOMBUJA JAIN MATH" ಹೆಸರಿಗೆ ಎಂ.ಓ., ಬ್ಯಾಂಕ್ ಚೆಕ್ ಹಾಗೂ ಡಿ.ಡಿ. ಮೂಲಕ ಕಳುಹಿಸಿಕೊಡಬಹುದಾಗಿದೆ.

ಶ್ರೀ ಹೊಂಬುಜ ಜೈನಮಠ, ಅಂಚೆ : ಹುಂಚ
ಶಿವಮೊಗ್ಗ ಜಿಲ್ಲೆ - 577 436 ಫೋ: 08185-262722

ತಮ್ಮ ಆಗಮನಾಭಿಲಾಷಿಗಳು
ಆಡಳಿತಾಧಿಕಾರಿ

ಗುರುದೇವ

GURUDEVA MONTHLY

RNI No. 13248/57-POSTEL REGD No. KA/SK/SMG 198/2015-17

ವಾರ್ಷಿಕ ಚಂದಾ : ರೂಪ್ಯಾ 150-00 ಮತ್ತು ಆಜೀವ ಸದಸ್ಯತ್ವಕ್ಕೆ : ರೂಪ್ಯಾ 1000-00 ಮಾತ್ರ

ವ್ಯವಸ್ಥಾಪಕರು, "ಗುರುದೇವ" ಕಾರ್ಯಾಲಯ, ಅಂಚೆ : ಹೊಂಬುಜ, ಶಿವಮೊಗ್ಗ-ಜಿಲ್ಲೆ, ಕರ್ನಾಟಕ-೫೭೭೪೩೬

Editor, Published & Printed by Sri G.J. Padmanabhaiah on behalf of Swasthishree Devendrakeerthi Bhattaraka Pattacharyavarya Swamiji, Sri Hombuja Jain Math Printed at Sri Mahaveer Printing Press, J.P.N. Road, Durgigudi, Shimoga (Ph: 08182- 222044) and Published at Gurudeva Karyalaya Sri Hombuja Jain Math Post: Humcha, Tq. Hosanagar., Dist. Shimoga-577436 Ph : 08185-262722, 262209